ಅಧ್ಯಕ್ಷರು :– ಟ್ರಿಬ್ಯುನಲ್ ಬಗ್ಗೆ ಬೇಕಾದಷ್ಟು ತಮಿಳುನಾಡಿನವರು ಹೇಳುತ್ತಾರೆ, ಮತ್ತೊಬ್ಬರು ಹೇಳುತ್ತಾರೆ, ಮಗದೊಬ್ಬರು ಹೇಳುತ್ತಾರೆ, ಆದರೆ ನಮ್ಮ ಸರ್ಕಾರದವರ ಧೋರಣೆ ಈ ಸದನದ ಮುಂದೆ ಸ್ಪಷ್ಟವಾಗಿದೆ. ಆದ್ದರಿಂದ ದ್ವಂದ್ವಕ್ಕೆ ಎಡೆಇಲ್ಲ

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ, ಹಿಂದಿನ ಮುಖ್ಯಮಂತ್ರಿಗಳು ಸರ್ವಪಕ್ಷಗಳ ಸಭೆಯನ್ನು ಕರೆಯುತ್ತೇವೆಂದು ಹೇಳಿ ಇವತ್ತಿನವರೆವಿಗೂ ಕರೆದಿಲ್ಲ. ನಾವು ಡಾರ್ಕ್‌ನಲ್ಲಿದ್ದೇವೆ.

ಅಧ್ಯಕ್ಷರು :– ಸೋಮವಾರ ಮೀಟಿಂಗ್ ಕರೆದಿದ್ದಾರೆ. ಆವತ್ತಿನಿಂದ ಇವತ್ತಿನವರೆಗೆ ನೀರನ್ನು ಬಿಟ್ಟಿಲ್ಲ ಸೋಮವಾರದವರೆಗೂ ಬಿಡುವುದಿಲ್ಲ. ಸಮಾಧಾನವಾಯಿತೇ.

ಗಮನ ಸೆಳೆಯುವ ಸೂಚನೆ

ವಿಷಯ :– ರಾಜ್ಯದಲ್ಲಿ ಅಬಕಾರಿ ತೆರಿಗೆಯ ಹೆಚ್ಚಳದಿಂದ ಉಂಟಾಗಿರುವ ಪರಿಸ್ಥಿತಿ.

ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೆ, ನಿಯಮ 72ರ ಪ್ರಕಾರ ರಾಜ್ಯದಲ್ಲಿ ಅಬಕಾರಿ ತೆರಿಗೆಯ ಹೆಚ್ಚಳದಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಕೆ. ಶಿವಮೂರ್ತಿ (ಅಬಕಾರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

1990–91ರ ಸಾಲಿಗೆ ಹೊರ ರಾಜ್ಯಕ್ಕೆ ರಫ್ತು ಮಾಡುವ ರಫ್ತು ಶುಲ್ಕವಲ್ಲದೆ ಬೇರೆ ಯಾವುದೇ ರೀತಿಯ ಅಬಕಾರಿ ಶುಲ್ಕವನ್ನು ಹೆಚ್ಚಿಸಿಲ್ಲ. ಹೊರರಾಜ್ಯಕ್ಕೆ ರಫ್ತು ಶುಲ್ಕವನ್ನು ರೂ. 1–00 ರಿಂದ ರೂ. 20–00ಕ್ಕೆ ಹೆಚ್ಚಿಸಲಾಗಿದೆ. ಈ ಮೊದಲು ಹೊರ ರಾಜ್ಯಗಳಿಗೆಂದು ಸಾಗಿಸುತ್ತಿದ್ದ ಮದ್ಯವನ್ನು ನಮ್ಮ ರಾಜ್ಯದಲ್ಲಿಯೇ ಮಾರಾಟ ಮಾಡುತ್ತಿದ್ದುದರಿಂದ ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ನಷ್ಟವಾಗುತ್ತಿದ್ದುದರಿಂದ ಈ ಕ್ರಮವನ್ನು ತೆಗೆದುಕೊಳ್ಳಲಾಯ್ತು.

ಇತಹ ಹಾವಳಿಯನ್ನು ತಡೆಗಟ್ಟಲು ಸರ್ಕಾರ ಕರ್ನಾಟಕ ರಾಜ್ಯ ಸಂಸ್ಥೆಯಾದ ಎಂ.ಎಸ್.ಐ.ಎಲ್. ಮೂಲಕ ಮದ್ಯ ಸರಬರಾಜನ್ನು ಮಾಡಲು ಉದ್ದೇಶಿಸಿತು. ಆದರೆ ಭಾರತದ ಸರ್ವೋಚ್ಚ ನ್ಯಾಯಾಲಯವು ಸರ್ಕಾರ ಈ ಬಗ್ಗೆ ಹೊರಡಿಸಿದ ನೋಟಿಫಿಕೇಶನ್‌ಗಳಿಗೆ ತಡೆಯಾಜ್ಞೆ ಕೊಟ್ಟಿದ್ದುದರಿಂದ ಹೊರ ರಾಜ್ಯಗಳಿಗೆ ರಫ್ತು ಮಾಡುವ ಶುಲ್ಕವನ್ನು ರೂ. 1 ರಿಂದ 20 ಕ್ಕೆ ಹೆಚ್ಚಿಸಿ, ಹೊರರಾಜ್ಯಗಳಿಗೆಂದು ರಾಜ್ಯದಲ್ಲಿಯೇ ಮಾರುವ ಅಕ್ರಮ ಕಡಿಮೆ ಮಾಡಲು ಈ ಕ್ರಮ ತೆಗೆದುಕೊಳ್ಳಲಾಗಿದೆ. ಹೊರರಾಜ್ಯಗಳಿಗೆ ರಫ್ತು ಆಗುತ್ತಿದ್ದ ಸಿವಿಲ್ ಎಕ್ಸ್‌ಪೋರ್ಟ್ ತಿಂಗಳಿಗೆ 20–23 ಲಕ್ಷ ಲೀಟರ್‌ಗಳಿಂದ ಈಗ 4 ರಿಂದ 5 ಲಕ್ಷ ಲೀಟರ್‌ಗಳು ಪ್ರತಿ ತಿಂಗಳಿಗೆ ಇಳಿಮುಖವಾಗಿದ್ದರೂ ಸರ್ಕಾರಕ್ಕೆ ಬರಬೇಕಾಗಿರುವ ವರಮಾನ ತಿಂಗಳಿಗೆ 20 ರಿಂದ 30 ಲಕ್ಷ ಲೀಟರ್‌ಗಳಿಂದ ಈಗ ಎಂಭತ್ತು ಲಕ್ಷ ರೂ. ದಿಂದ 1 ಕೋಟಿ ರೂ.ಗಳಷ್ಟು ಹೆಚ್ಚಾಗಿದೆ. ರಫ್ತು ಶುಲ್ಕ ಹೆಚ್ಚಿರುವುದರಿಂದ ರಾಜ್ಯದಲ್ಲಿರುವ ಡಿಸ್ಟಿಲರಿಗಳು ಮುಚ್ಚುವ ಸಂಭವವಿದ್ದು ಹಾಗೂ ಅದರಿಂದ ಹಲವಾರು ನೌಕರರು ನಿರುದ್ಯೋಗಿಗಳಾಗುತ್ತಾರೆಂದು ಹೇಳುವುದು ಸರಿಯಲ್ಲ. ಅಂಕಿ ಅಂಶಗಳ ಪ್ರಕಾರ ಕಳೆದ ವರ್ಷ ಏಪ್ರಿಲ್ ನಿಂದ ನವೆಂಬರ್ ವರೆಗೆ ಹಾಗೂ ಈ ವರ್ಷ ಅದೇ ಅವಧಿಗೆ ಹೋಲಿಸಿ ನೋಡಿದಾಗ, ಮದ್ಯ ತಯಾರಿಕೆಯಲ್ಲಿ ಹೆಚ್ಚಿನ ಇಳಿತವೇನೂ ಇರುವುದಿಲ್ಲ. 1989–90 ರಲ್ಲಿ ಮದ್ಯ ತಯಾರಿಕೆಯು 262.76 ಲಕ್ಷ ಲೀಟರ್‌ಗಳಿದ್ದು ಈ ವರ್ಷ ಅದೇ ಅವಧಿಯಲ್ಲಿ 207.67 ಲಕ್ಷ ಲೀಟರ್‌ಗಳಾಗಿರುತ್ತವೆ. ರಾಜ್ಯದಲ್ಲಿ ಮದ್ಯ ಮಾರಾಟವು ಕಳೆದ ವರ್ಷ ಇದೇ ಅವಧಿಯಲ್ಲಿ 72.87 ಲಕ್ಷ ಲೀಟರ್‌ಗಳಿದ್ದು, ಅದು ಈ ವರ್ಷ ಇದೇ ಅವಧಿಯಲ್ಲಿ 107.47 ಲಕ್ಷ ಲೀಟರ್‌ಗಳಾಗಿರುತ್ತದೆ. ರಾಜ್ಯದ ಹೊರಗಿನ ಮಾರಾಟ ಕಳೆದ ವರ್ಷ 18.4 ಲಕ್ಷ ಲೀಟರ್‌ಗಳಿದ್ದು ಅದು ಈ ವರ್ಷ 8.4 ಲಕ್ಷ ಲೀಟರ್‌ಗಳಿಗೆ ಇಳಿದಿದೆ. ರಾಜ್ಯದ ಹೊರಗಿನ ರಫ್ತು ಇಳಿಮುಖವಾಗಿದ್ದರೂ ಐ.ಎಂ.ಎಲ್. ಬಾಬಿನಿಂದ (ರಾಜ್ಯದ ಒಳಗೆ ಹಾಗೂ ಹೊರಗೆ ಆಗಿರುವ ಮಾರಾಟದಿಂದ) ಆದಾಯ ಗಣನೀಯವಾಗಿ ಹೆಚ್ಚಿದೆ. 1989–90ರ ಏಪ್ರಿಲ್‌ನಿಂದ ನವೆಂಬರ್‌ವರೆಗಿನ ವರಮಾನ 42.50 ಕೋಟಿಗಳಿಂದ ಈ ವರ್ಷ ಅದೇ ಅವಧಿಯಲ್ಲಿ ವರಮಾನವು 62.61 ಕೋಟಿ ರೂಪಾಯಿಗಳಷ್ಟು ಆಗಿರುತ್ತದೆ.

ಈ ಅಂಕಿಅಂಶಗಳಿಂದ ರಫ್ತು ಶುಲ್ಕ ಹೆಚ್ಚಳದಿಂದ ರಾಜ್ಯದಲ್ಲಿರುವ ಡಿಸ್ಟಿಲರಿಗಳು ಮುಚ್ಚಿ ಹಲವಾರು ನೌಕರರು ನಿರುದ್ಯೋಗಿಗಳಾಗುವ ಸಂಭವಕ್ಕೆ ಯಾವ ಆಧಾರವೂ ಇರುವುದಿಲ್ಲ. 10–12–1990 ರಿಂದ ಬೆಂಗಳೂರಿನ ಮೆ. ನಿರಾಯು ಡಿಸ್ಟಿಲರಿ ತನ್ನ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಇಲ್ಲದಿರುವ ಕಾರಣ ಲೇ ಆಫ್ ಕೊಟ್ಟಿರುತ್ತದೆ. ಈ ಕ್ರಮಕ್ಕೂ ರಫ್ತು ಶುಲ್ಕ ಹೆಚ್ಚಳಕ್ಕೂ ಯಾವ ಸಂಬಂಧವೂ ಇರುವುದಿಲ್ಲ. ಸದರಿ

ಸಂಸ್ಥೆಯಲ್ಲಿರುವ ಪ್ರೊಡಕ್ಷನ್ ಅಂಡ್ ಮಾರ್ಕೆಟಿಂಗ್ ಡಿವಿಜನ್ ಹಾಗೂ ಸೇಲ್ಸ್ ಡಿವಿಜನ್‌ಗೂ ತಾರತಮ್ಯ ಇರುವುದರಿಂದ ಕರ್ನಾಟಕ ರಾಜ್ಯದಲ್ಲಿರುವ ಮಾರಾಟ ಕಡಿಮೆಯಾಗಿದೆ ಎಂದು ತಿಳಿದು ಬಂದಿದೆ. ಆದುದರಿಂದ ರಫ್ತು ಶುಲ್ಕ ಹೆಚ್ಚಳದಿಂದ ರಾಜ್ಯದಲ್ಲಿನ ಡಿಸ್ಟಿಲರಿಗಳು ಮುಚ್ಚುವುದಕ್ಕೆ ಯಾವ ಕಾರಣವೂ ಇಲ್ಲ.

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೆ, ನಾನು ಈ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದು ಎರಡು ಕಾರಣಗಳಿಂದ 1) ಡಿಸ್ಟಿಲರಿ ಗಳಲ್ಲಿ ಕೆಲಸ ಮಾಡುತ್ತಿದ್ದ ಬಹಳ ಜನ ನೌಕರರನ್ನು ನೌಕರಿಯಿಂದ ಹೊರ ಹಾಕಿದ್ದಾರೆ. ಕಾರಣ ಒಂದು ರೂಪಾಯಿ ಇದ್ದ ಸುಂಕವನ್ನು 20 ರೂಪಾಯಿಗೆ ಏರಿಸಿರುವುದರಿಂದ ಉತ್ಪಾದನೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇರತಕ್ಕ ನೌಕರರ ಸಂಖ್ಯೆಯನ್ನು ಕಡಿಮೆ ಮಾಡಲು ಮತ್ತು ಬಹುತೇಕ ಗೋವಾ ಕೇರಳ ಮತ್ತು ಮಹಾರಾಷ್ಟ್ರಗಳಿಗೆ ಡಿಸ್ಟಿಲರಿ ಗಳನ್ನು ಪರ್ಗಾವಣೆ ಮಾಡತಕ್ಕ ಪ್ರಯತ್ನ ಮಾಡುತ್ತಿದ್ದಾರೆ ಎನ್ನುವುದು ಒಂದು ಕಾರಣ. ನನಗೆ ಬಂದ ಮಾಹಿತಿ ಯಂತೆ ಕರ್ನಾಟಕದ ಡಿಸ್ಟಿಲರಿಗಳ ಮಾಲೀಕರುಗಳು ಹೊರಗಡೆ ಹೋಗಿರತಕ್ಕದ್ದು ಗಮನಕ್ಕೆ ಬಂದಿದೆ. 2) ಮತ್ತೊಂದು ಮುಖ್ಯವಾದ ಅಂಶವೆಂದರೆ, ಮಾನ್ಯ ಸಚಿವರು ಈಗ ಉತ್ತರದಲ್ಲಿ "ಹೊರರಾಜ್ಯಗಳಿಗೆ ರಫ್ತು ಆಗುತ್ತಿದ್ದ ಸಿವಿಲ್ ಎಕ್ಸ್‌ಪೋರ್ಟ್ ತಿಂಗಳಿಗೆ 20–23 ಲಕ್ಷ ಲೀಟರ್‌ಗಳಿಂದ ಈಗ 4 ರಿಂದ 5 ಲಕ್ಷ ಲೀಟರ್‌ಗಳಿಗೆ ಪ್ರತಿ ತಿಂಗಳಿಗೆ ಇಳಿಮುಖವಾಗಿದೆ" ಎಂದು ಹೇಳಿದ್ದಾರೆ. ಅರ್ಥಾತ್ ನಾಲ್ಕನೇ ಒಂದು ಭಾಗದಷ್ಟು ಉತ್ಪಾದನಾ ಸಾಮರ್ಥ್ಯವನ್ನು ಡಿಸ್ಟಿಲರಿಗಳು ಕಳೆದುಕೊಂಡಿವೆ ಎಂದು ಇದರಿಂದ ಅಭಿವ್ಯಕ್ತವಾಗುತ್ತದೆ.ಇದರ ಪರಿಣಾಮ ಏನು ? ಹಣದ ದೃಷ್ಟಿಯಿಂದ ನೋಡುವುದು ಬೇರೆ. ನಾನು ಅದಕ್ಕೆ ಹೋಗುವುದಿಲ್ಲ. ಸರ್ಕಾರ. ಈ ಸುಂಕವನ್ನು ಏರಿಸಿದಾಗ 36 ಕೋಟಿ ರೂಪಾಯಿ ಕರ್ನಾಟಕ ರಾಜ್ಯಕ್ಕೆ ಬರುತ್ತದೆಂದು ಹೇಳಿಟ್ಟು ಆದಾದಮೇಲೆ ರಿವೈಸ್ ಮಾಡಿ 9ಕೋಟಿ ರೂಪಾಯಿ ಬರುತ್ತದೆ ಎಂದು ಹೇಳಿದರು. ಈಗ ಎಷ್ಟು ಬಂದಿದೆಯೊ ನನಗೆ ಗೊತ್ತಿಲ್ಲ. ನಾನು ಆ ವಿಷಯಕ್ಕೆ ಹೋಗುವುದಿಲ್ಲ. ಇಲ್ಲಿ ಮುಖ್ಯವಾಗಿ ನಮ್ಮಲ್ಲಿ ಮೊಲಾಸಿಸ್ ಉತ್ಪಾದನೇ ಎಷ್ಟಾಗುತ್ತಿದೆ, ರೈತರಿಗೆ ಏನು ಹಾನಿ ಆಗುತ್ತಿದೆ ಈ ಎರಡು ಭಾಗ ಇದೆ. ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ ನಮ್ಮ ರಾಜ್ಯದಲ್ಲಿ anticipated molasses production 3.5 lakh ton as against 3.25 1989–90 10 ಪರ್ಸೆಂಟ್ ಕ್ಯಾಟಲ್ ಫೀಡ್ಸ್‌ಗೆ ಅದಕ್ಕೆ, ಇದಕ್ಕೆ ಹೋಗುತ್ತದೆ. ಡಿಸ್ಟಿಲರೀಸ್‌ಗೆ ಇರತಕ್ಕ ಮೊಲಾಸಿಸ್ 3.15 in terms of crores of liters alcohol available total is about 7 crores litres, ಈಗ ಅದು ಏನಾಗುತ್ತಿದೆ ಎಂದರೆ, ಅರಾಕ್‌ಗೆ 3.25 ಲಕ್ಷ ಲೀಟರ್ಸ್ ಬಳಸಿ,ಕೆಮಿಕಲ್ ಯೂನಿಟ್ಸ್‌ಗೆ 6 ಕೋಟಿ. IML present demand for CSD is a bout 1.4 ಕೋಟಿ. ಒಟ್ಟು 5 ಕೋಟಿ ಲೀಟಲರ್ ಗಳನ್ನು ಹೀಗೆ ಬಳಸಬಹುದು. ಉಳಿಯತಕ್ಕ 2 ಕೋಟಿ ಲೀಟರ್ excess alcohol is not utilised by way of either export finished goods.

ಎಕ್ಸ್‌ಪೋರ್ಟ್ ಫಿನಿಷ್ಡ್ ಗೂಡ್ಸ್ ಎಂದು ಏತಕ್ಕೆ ಹೇಳುತ್ತಿದ್ದೇನೆಂದರೆ, ನಮಗೆ ಏನು ತೆರಿಗೆ ಬರುತ್ತದೆ, ಆ ತೆರಿಗೆಯನ್ನು ಫಿನಿಷ್ಡ್ ಗೂಡ್ಸ್ ಆಗದೇ ಇದ್ದರೆ ಹಾಕುವುದಕ್ಕೆ ಬರುವುದಿಲ್ಲ. ಹೀಗೆ ಉಳಿಯತಕ್ಕ 2 ಕೋಟಿ ಲೀಟರ್‌ನಷ್ಟು ಮೊಲಾಸಿಸ್ ಏನು ಮಾಡಬೇಕು ? ಬಹುತೇಕ ಸಕ್ಕರೆ ಕಂಪನಿಯಲ್ಲಿ ಹೆಚ್ಚು ಹೆಚ್ಚು ದುಡ್ಡು ಕೊಡುತ್ತಾರೆಂದು ರೈತರಿಗಿಂತ ಹೆಚ್ಚಾಗಿ ಮೊಲಾಸಿಸ್‌ಗೆ ಕಬ್ಬು ಕೊಟ್ಟರೆ ಹೆಚ್ಚು ದುಡ್ಡು ಬರುತ್ತದೆ. ಆ ಮೊಲಾಸಿಸ್ ನಷ್ಟವಾದರೆ ರೈತರಿಗೆ ಕಬ್ಬಿನ ಬೆಲೆ ಕೂಡ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇಲ್ಲಿ ಪ್ರತಿಪಕ್ಷ ಪ್ರಶ್ನೆ ಏನೋ ನನಗೆ ಗೊತ್ತಿಲ್ಲ. ಸರ್ವೋಚ್ಚ ನ್ಯಾಯಾಲಯದವರು ತಡೆಯಾಜ್ಞೆ ಕೊಟ್ಟಿದ್ದಾರೆ. ತಡೆಯಾಜ್ಞೆ ಸಿಕ್ಕಿರುವವರು ನೇರವಾಗಿ ಸೇಲ್ ಮಾಡುತ್ತಾರೆ. ತಡೆಯಾಜ್ಞೆ ಸಿಕ್ಕದೇ ಇರುವವರು ಸರ್ಕಾರಿ ಆಜ್ಞೆಯಂತೆ ಕೆಲವರು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ಸ್ ಮುಖಾಂತರ ಮಾರಾಟ ಮಾಡುತ್ತಾ ಇರಬಹುದು. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ಸ್ ಮೂಲಕ ಮಾರಾಟ ಮಾಡುವುದಕ್ಕೆ ನನ್ನದೇನೂ ವಿರೋಧ ಇಲ್ಲ; ಮಾರಾಟ ಮಾಡಿ. ಆದರೆ ಇಲ್ಲಿ ಹೊರದೇಶಕ್ಕೆ ಹೋಗದೇ ಇರುವ ಸ್ಥಿತಿಯನ್ನು ನಾವು ನಿರ್ಮಾಣ ಮಾಡಿದ್ದೇವೆ. ಬೇರೆ ಬೇರೆ ರಾಜ್ಯಗಳಲ್ಲಿ ಇರುವುದಕ್ಕಿಂತ 20 ಪಟ್ಟು ತೆರಿಗೆ ಜಾಸ್ತಿಯಾಗಿದೆ ಹೊರಗಡೆ ಹೋಗುವಾರದು ಎನ್ನುವ ಕಾರಣಕ್ಕೆ. ಹೊರಕ್ಕೆ ಹೋಗಲೇಬಾರದು ಎನ್ನುವುದಕ್ಕೆ ಎಕ್ಸ್‌ಪೋರ್ಟ್ ಬ್ಯಾನ್ ಮಾಡಿಬಿಡಿ.ಉತ್ತರ-ಪ್ರದೇಶದಲ್ಲಿ ಸರಿಸುಮಾರು 2 ಪರ್ಸೆಂಟ್, ಪಂಜಾಬ್‌ನಲ್ಲಿ 6 ಪರ್ಸೆಂಟ್, ನಮ್ಮ ಪಕ್ಕದ ರಾಜ್ಯವಾದ ತಮಿಳು-ನಾಡಿನಲ್ಲಿ .45 ಪರ್ಸೆಂಟ್, ನಮ್ಮದು 20 ಪರ್ಸೆಂಟ್. ಆದ್ದರಿಂದ ಈ ವ್ಯವ್ಯಸ್ಥೆಯನ್ನು ಬದಲಾಯಿಸುವುದಕ್ಕೆ ಮಾನ್ಯ ಮಂತ್ರಿಗಳು ಮತ್ತು ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ? ನನಗಿರತಕ್ಕ ಶಂಕೆಗಳನ್ನು ತಮ್ಮ ಮೂಲಕ ಪರಿಹರಿಸಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಪಿ. ಜಿ. ಆರ್. ಸಿಂಧ್ಯ :– ಮಾನ್ಯ ಅಧ್ಯಕ್ಷರೇ, ಕಳೆದ ಬಜೆಟ್ ಅಧಿವೇಶನದಲ್ಲಿ ಮಾನ್ಯ ರಾಶೇಖರ ಮೂರ್ತಿಯವರು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಾಗಿದ್ದಾಗ ಇದೇ ವಿಚಾರವನ್ನು ನಾವು ಪ್ರಸ್ತಾಪಮಾಡಿದ್ದೆವು. ಲೋಕಲ್ ಇಂಡಸ್ಟ್ರೀಸ್ ಎಕ್ಸ್‌ಪೋರ್ಟ್ ಮಾಡತಕ್ಕ ಐ.ಎಂ.ಎಫ್.ಎಲ್. ಏನಿದೆ ಅದನ್ನು ಮತ್ತೆ ರಾ ್ಯದಲ್ಲಿ

ಡಂಪ್ ಮಾಡುತ್ತಾರೆ. ಅದನ್ನು ರೆಗ್ಯುಲೇಟ್ ಮಾಡಬೇಕು ಎಂಬ ದೃಷ್ಟಿಯಿಂದ ಸೆಲ್ಲಿಂಗ್ ಪಾಯಿಂಟಿನ್ನು ಎಂ. ಎಸ್. ಐ. ಎಲ್. ಮೂಲಕ ಮಾಡಬೇಕು ಎಂದು ಹೇಳಿದರು. ಅದರಿಂದ ಸೆಕೆಂಡ್ಸ್ ಕಡಿಮೆ ಆಗುವುದಾದರೆ, ರಾಜ್ಯಕ್ಕೆ ನಷ್ಟ ಆಗುತ್ತಿದ್ದರೆ, ಅದನ್ನು ಮಾಡಬಹುದು ಎಂದು ನಾವೂ ಕೂಡ ಒಪ್ಪಿದ್ದೆವು. ಆದರೆ ಒಂದು ಭರವಸೆಯನ್ನು ಕೂಡ ಆ ಸಂದರ್ಭದಲ್ಲಿ ಅವರು ಕೊಟ್ಟಿದ್ದರು. 1 ರೂಪಾಯಿ ಡ್ಯೂಟಿ ಇರುವುದನ್ನು 20 ರೂಪಾಯಿ ಏನು ಮಾಡಿದ್ದೀವೆ ಅದನ್ನು ಕಡಿಮೆ ಮಾಡತಕ್ಕ ಭರವಸೆ ನಾನು ಕೊಡುತ್ತೇನೆ. ಆದರೆ ಸುಪ್ರೀಂ ಕೋರ್ಟ್‌ನಲ್ಲಿ ಇರುವ ಕೇಸನ್ನು ಡಿಸ್ಟಿಲರಿಗಳವರು ವಿತ್‌ಡ್ರಾ ಮಾಡಿಕೊಳ್ಳಬೇಕು ಎಂದು ಅವರು ಹೇಳುತ್ತಿದ್ದರು. ಮಾರ್ಜಿನಲ್ಲಾಗಿ ಸ್ವಲ್ಪ ಇನ್‌ಕ್ರೀಸ್ ಇರಬಹುದು, ಇಲ್ಲ ಎಂದು ಹೇಳುವುದಿಲ್ಲ. ಆದರೆ 18-19 ಸಣ್ಣ ಡಿಸ್ಟಿಲರಿಗಳು ಏನಿವೆ ಅವು ಮುಚ್ಚತಕ್ಕ ಸಂದರ್ಭ ಬಂದಿದೆ. ಆದರಲ್ಲಿ ಯಾವುದೇ ರೀತಿಯ ಸಂಶಯ ಇಲ್ಲ. ಅವರು 15–20 ವರ್ಷಗಳಿಂದ ಏನು ಸೇಲ್ಸ್ ಡೆವಲಪ್ ಮಾಡಿದ್ದರು ಅದು ಕಂಪ್ಲೀಟಾಗಿ ಜೀರೋಗೆ ಬರುವುದರಲ್ಲಿ ಯಾವುದೇ ರೀತಿಯ ಸಂಶಯ ಇಲ್ಲ. ಆದ್ದರಿಂದ ಲೋಕಲ್ ಇಂಡಸ್ಟ್ರೀಸನ್ನು ಕ್ಲೋಸ್ ಮಾಡದೇ ಇರುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಎಕ್ಸೈಜ್ ಡ್ಯೂಟಿಯನ್ನು ಕಡಿಮೆ ಮಾಡಲೇಬೇಕು ಎಂದು ನಾನು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ :– ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಚಂದ್ರೇಗೌಡರು ಹಾಗೂ ಮಾನ್ಯ ಸಿಂಧ್ಯಾ ಅವರು ಈ ಬಗ್ಗೆ ವಿವರವಾಗಿ ಹೇಳಿದ್ದಾರೆ. ಸರ್ಕಾರದ ಉದ್ದೇಶ ರೆವಿನ್ಯೂ ಜನರೇಟ್ ಆಗಬೇಕೆಂಬುದು. ಆದರೆ ಇದು ಆಗುವಾಗ ಕೈಗಾರಿಕೆಯನ್ನು ಮುಚ್ಚಿ ಅದನ್ನು ಮಾಡುತ್ತೇವೆ. ಅಥವಾ ಕೈಗಾರಿಕೆಯಲ್ಲಿ ಇರುವ ಕಾರ್ಮಿಕರ ಬಗ್ಗೆ ನಾವು ಯಾವುದೇ ಚಿಂತನೆ ಮಾಡುವುದಿಲ್ಲ ಎಂಬ ಉದ್ದೇಶದಿಂದ ಮಾಡಿದರೆ ಆ ಉದ್ದೇಶ ಸರಿಯಲ್ಲ. ವೆಲ್‌ಫೇರ್ ಸ್ಟೇಟ್‌ನಲ್ಲಿ ರೆವಿನ್ಯೂ ಜನರೇಟ್ ಮಾಡುವಾಗ ಕೈಗಾರಿಕೆ ಬೆಳೆಯುವ ಬಗ್ಗೆ, ಕಾರ್ಮಿಕರ ಹಿತದ ಬಗ್ಗೆ ನೋಡಬೇಕಾಗುತ್ತದೆ. ಇವತ್ತು ತಮ್ಮ ಉದ್ದೇಶ 36 ಕೋಟಿ ರೂಪಾಯಿ ಜನರೇಟ್ ಮಾಡುವುದಿತ್ತು. ಆದರಲ್ಲಿ ಇವತ್ತು ತಾವು ಎಷ್ಟು ಕೋಟಿ ರೂಪಾಯಿಗೆ ಬಂದು ಮುಟ್ಟಿದ್ದೀರಿ ಎನ್ನುವುದರ ಬಗ್ಗೆ ವಿವರಣೆ ಕೊಡಬೇಕು. ಬೇರೆ ರಾಜ್ಯಗಳಾದ ಮಹಾರಾಷ್ಟ್ರ, ತಮಿಳುನಾಡು, ಪಂಜಾಬ್‌ನಲ್ಲಿ 8 ಆಣೆ, 12 ಆಣೆ, 1 ರೂಪಾಯಿ ಹೆಚ್ಚು ಮಾಡಿದ್ದಾರೆಂದು ಕೇಳಿದೆ. ಮಹಾರಾಷ್ಟ್ರದಲ್ಲಿ ಮೊನ್ನೆ 5 ರೂಪಾಯಿ ಮಾಡಿದ್ದಾರೆಂದು ಕೇಳಿದೆ. ಅದು ಒಂದು ಬಿಟ್ಟರೆ ಬೇರೆ ರಾಜ್ಯಗಳಲ್ಲಿ 8 ಆಣೆ, 12 ಆಣೆ ಇರುವಾಗ ನಮ್ಮಲ್ಲಿ 20 ರೂಪಾಯಿ ಮಾಡಿ ಏನು ಸಾಧನೆ ಮಾಡುತ್ತಿದ್ದೀರಿ ? ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣ ಕೊಡಬೇಕು. ಎಕ್ಸ್‌ಪೋರ್ಟ್ ಕಡಿಮೆ ಆಗಿದೆ ಎಂದು ಮಾನ್ಯ ಸಚಿವರೇ ಉತ್ತರ ಕೊಟ್ಟ ಮೇಲೆ ಅದರ ಪರಿಣಾಮ ಕೈಗಾರಿಕೆಗಳ ಮೇಲೆ ಆಗಿದೆ ಎಂದು ಅರ್ಥವಾಗುತ್ತದೆ. ಇವತ್ತು ಅಂಕಿಅಂಶ ಕೊಟ್ಟಿದ್ದಾರೆ. ರೆವಿನ್ಯೂ ಸ್ವಲ್ಪ ಹೆಚ್ಚು ಆಗಿದೆ ಎಂದು ಹೇಳಿದ್ದಾರೆ. 20 ರೂಪಾಯಿಗೆ ಹೆಚ್ಚು ಮಾಡಿದ್ದರಿಂದ ರೆವಿನ್ಯೂ ಹೆಚ್ಚಾಗಿದೆ. ಇದರಿಂದ ಪ್ರೊಡಕ್ಷನ್ ಮತ್ತು ಇಂಡಸ್ಟ್ರಿ ಮೇಲೆ ಪರಿಣಾಮ ಉಂಟಾಗಿದೆ. ಈಗಾಗಲೇ ಎಷ್ಟೋ ಕೈಗಾರಿಕೆಗಳು ಮಹಾರಾಷ್ಟ್ರ ಮತ್ತು ಗೋವಾಕ್ಕೆ ಹೋಗಿವೆ. ಆದ್ದರಿಂದ ಮಾನ್ಯ ಸಚಿವರು ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಪ್ರೊಡಕ್ಷನ್ ಹೆಚ್ಚು ಮಾಡುವುದಕ್ಕೆ, ಎಕ್ಸ್‌ಪೋರ್ಟ್ ಹೆಚ್ಚು ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಮತ್ತೆ ಇವತ್ತು ತಮಿಳುನಾಡು ಮತ್ತು ಬೇರೆ ರಾಜ್ಯಗಳಿಂದ ಏನು ಲಿಕ್ಕರ್ ಇಂಪೋರ್ಟ್ ಆಗುತ್ತಿದೆ ಆ ಲಿಕ್ಕರ್ ಬೆಲೆ ನಮ್ಮ ಲಿಕ್ಕರ್‌ಗಿಂತ ಚೀಪ್ ಆಗಿದೆ. ಅಲ್ಲಿ ಇಂಪೋರ್ಟ್ ಡ್ಯೂಟಿ ಕಡಿಮೆ ಹಾಕಿದ್ದಾರೆ. ಇವತ್ತು ತಾವು ಬೇರೆ ರಾಜ್ಯಗಳ ಇಂಡಸ್ಟ್ರೀಗಳಿಗೆ ಸಹಾಯ ಮಾಡುತ್ತೀರಾ ? ಇಲ್ಲಿ ಇರುವ ಕೈಗಾರಿಕೆಗಳು ಬೆಳೆಯಬೇಕೆಂಬ ಉದ್ದೇಶ ನಿಮಗೆ ಇದೆಯೇ ? ನಿಮ್ಮ ಉದ್ದೇಶ ಏನಿದೆ ? ನಮ್ಮ ಪ್ರೊಡಕ್ಷನ್ ಒಳ್ಳೆಯದು ಇದ್ದರೆ, ನಮ್ಮ ಕನ್‌ಸೂಮರ್ಸ್‌ಗೆ ಆ ಪ್ರಾಡಕ್ಟ್ಸ್ ಬೇಕಾದರೆ ನಮ್ಮ ಪ್ರೊಡಕ್ಷನ್ ಕಾಂಪಿಟೇಟೀಲ್ ರೇಟ್‌ನಲ್ಲಿ ನಮ್ಮ ರಾಜ್ಯದಲ್ಲಿ ಸಿಗುವಹಾಗೆ ಮಾಡಬೇಕು. ಮತ್ತೆ ಬೇರೆ ರಾಜ್ಯದಿಂದ ಬರುವ ಲಿಕ್ಕರ್ ಮೇಲೆ ತಾವು ಎಕ್ಸ್‌ಪೋರ್ಟ್ ಡ್ಯೂಟಿ ಹಾಕಬೇಕಾಗುತ್ತದೆ. ಮತ್ತೆ ಶುಗರ್ ಫ್ಯಾಕ್ಟರೀಸ್‌ನಲ್ಲಿ ತಯಾರಾಗುವ ಮೊಲ್ಯಾಸಿಸ್ ಬಗ್ಗೆ ಮಾನ ಚಂದ್ರೇಗೌಡರು ಹೇಳಿದಹಾಗೆ 2 ಕೋಟಿ ಲೀಟರ್ ಶುಗರ್ ಫ್ಯಾಕ್ಟರಿಯಲ್ಲಿ ಮೊಲ್ಯಾಸಿಸ್ ಉಳಿದರೆ ಇದರ ಪರಿಣಾಮ ರೈತರ ಮೇಲೆ, ಶುಗರ್ ಫ್ಯಾಕ್ಟರಿಗಳ ಮೇಲೆ ಏನು ಆಗಬಹುದು ಎಂಬುದನ್ನು ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು. ಮಾನ್ಯ ಸಚಿವರು ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೇ, ಎಂ. ಎಸ್. ಐ. ಎಲ್. ಮೂಲಕ ನಮ್ಮ ಸ್ವದೇಶೀ ಮದ್ಯವನ್ನು ಮಾರುವ ಬಗ್ಗೆ ಒಂದು ಸುಗ್ರೀವಾಜ್ಞೆಯನ್ನು ಹಿಂದಿನ ಸರ್ಕಾರ ತಂದಿತ್ತು. ಹಾಗೂ ಅದರ ಬಗ್ಗೆ ಈ ಸಭೆಯಲ್ಲಿ ಒಂದು ಮಸೂದೆ ಬರುವ ವ್ಯವಸ್ಥೆ ಇತ್ತು. ಇದುವರೆಗೂ ಆ ಮಸೂದೆ ಬಂದಿಲ್ಲ. ಆ ಮಸೂದೆಯನ್ನು ತರುತ್ತೀರೋ ಅಥವಾ ಅದು ಬರದೇ ಹಾಗೇ ಹೋಗುತ್ತದೋ ಎಂದು ಕೇಳುತ್ತೇನೆ. ಮತ್ತೆ ಅಬ್ಕಾರಿ ಬಾಬಿನಿಂದ ಏನೇನು ಅನ್ಯಾಯ ಆಗಿದೆ ಎನ್ನುವ ಬಗ್ಗೆ ಒಂದು ಶ್ವೇತ ಪತ್ರವನ್ನು ಹೊರಡಿಸುತ್ತೇವೆಂದು

ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಆ ಶ್ವೇತಪತ್ರವು ಯಾವಾಗ ಹೊರಬರುತ್ತದೆ ? ಯಾವಾಗ ಹೊರಡಿಸುತ್ತೀರಿ ? ಮತ್ತೆ ಸೆಕೆಂಡ್ಸ್ ಮದ್ಯ ಬೇರೆ ಬೇರೆ ರಾಜ್ಯಗಳಿಂದ ನಮ್ಮ ರಾಜ್ಯಕ್ಕೆ ಬಹಳ ಬುರುತ್ತಾ ಇದೆ. ಇದನ್ನು ತಡೆಯುವುದಕ್ಕೆ ಸರ್ಕಾರ ಏನು ಮಾಡಿದೆ ?

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) :– ಮಾನ ಅಧ್ಯಕ್ಷರೇ, ಬಜೆಟ್ ಬಗ್ಗೆ ಇಲ್ಲಿ ಚರ್ಚೆ ಮಾಡುವಾಗ ಈ ವಿಷಯದ ಬಗ್ಗೆ ಹಿಂದಿನ ಹಣಕಾಸಿನ ಸಚಿವರಾದ ಮಾನ್ಯ ಮೊತಿ ಯವರಿಗೆ ನಾವು ಒಂದು ಸ್ಪಷ್ಟವಾದ ಮಾತನ್ನು ಹೇಳಿದ್ದೆವು. ಇಡೀ ದೇಶದಲ್ಲಿ ಬೇರೆ ಯಾವ ರಾಜ್ಯದಲ್ಲೂ ಇಷ್ಟೊಂದು ಬೆಲೆ ಬೆಲೆ ಜಾಸ್ತಿ ಮಾಡಿಲ್ಲ. ಇಲ್ಲಿ 1 ರೂಪಾಯಿ ಇರುವುದನ್ನು 20 ರೂಪಾಯಿಗೆ ಏರಿಸಿರುವುದರಿಂದ ನಮ್ಮ ಡಿಸ್ಟಿಲರಿಗಳ ಬಾಗಿಲು ಮುಚ್ಚುವ ಪರಿಸ್ಥಿತಿಗೆ ಬರಬಹುದು. ಅಲ್ಲಿರತಕ್ಕ ಕಾರ್ಮಿಕರಿಗೆ ತೊಂದರೆಯಾಗಬಹು. ದಾದ್ದರಿಂದ ಈ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ನಾವು ಆಗ್ರಹಪಡಿಸಿದ್ದೆವು. ಸರ್ಕಾರಕ್ಕೆ ಈ ಬಗ್ಗೆ ಕಮಿಟ್‌ಮೆಂಟ್ ಇದ್ದರೆ, ಇಲ್ಲಿ ಸೆಕೆಂಡ್ಸ್ ಮಾರಾಟ ಆಗಬಾರದು, ಸರ್ಕಾರಕ್ಕೆ ಬರುವ ಆದಾಯ ಕಡಿಮೆ ಆಗಬಾರದು ಎಂದಿದ್ದರೆ, ಇಷ್ಟೊಂದು ಸಿಬ್ಬಂದಿಯನ್ನು ಹೊಂದಿರುವಾಗ, ಸೆಕೆಂಡ್ಸ್, ತಡೆ ಮಾಡುವುದಕೆ ಏನೇನೋ ಕ್ರಮ ತೆಗೆದುಕೊಳ್ಳುವುದು, ಈ ಉದ್ಯಮವನ್ನೇ ಬಂದ್ ಮಾಡುವ ಸ್ಥಿತಿಗೆ ತರುವಂಥಾದ್ದೇನು ?

11–40 ಎ. ಎಂ.

ಹಿಂದೆ ಡಿಸ್ಟಿಲರಿಗಳಲ್ಲಿ ಕೆಲಸ ಮಾಡತಕ್ಕ ಲೇಬರರ್ಸ್ ಎಷ್ಟು ಜನರಿದ್ದರು ಇವತ್ತು ಎಷ್ಟು ಜನರಿದ್ದಾರೆ ಎಂಬುದನ್ನು ಎಲ್ಲೂ ಹೇಳಿಲ್ಲ. ಆದಕ್ಕೋಸ್ಕರ ನಾನು ಹೇಳುವುದು ಏನೆಂದರೆ, ಯಾರೋ ಒಬ್ಬರು ತಪ್ಪು ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಆದಕ್ಕೋಸ್ಕರ ಇಲ್ಲಿರುವಂತಹ ಉದ್ಯಮಗಳನ್ನು ನಿಲ್ಲಿಸುವಂತಹ ಸ್ಥಿತಿಗೆ ಸರ ರೀತಿಯಲ್ಲಿ ಅಬಕಾರಿ ಶುಲ್ಕವನ್ನು ಒಂದು ರೂಪಾಯಿಯಿಂದ 20 ರೂಪಾಯಿಗಳಿಗೆ ಏನು ಏರಿಸಿದ್ದೀರಿ ಅದನ್ನು ಕಡಿಮೆ ಮಾಡಬೇಕೆಂದು ನಾನು ಅವೊತ್ತು ಹೇಳಿದ್ದೇನೆ. ಇವತ್ತೂ ಸಹ ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಎಂ. ಎಸ್. ಐ. ಎಲ್. ನಿಂದ ಏನು ವ್ಯವಹಾರ ಆಗಬೇಕಾಗಿತ್ತು ಆ ಕಡೆಯಿಂದ ಮದ್ಯ ಸರಬರಾಜು ಮಾಡಬೇಕೆನ್ನುವ ಉದ್ದೇಶವನ್ನು ತಾವು ಇಟ್ಟುಕೊಂಡಿದ್ದೀರಿ ಅದಕ್ಕೆ ಇವತ್ತು ಸುಪ್ರೀಂ ಕೋರ್ಟ್‌ನಲ್ಲಿ ತಡೆಯಾಜ್ಞೆ ಇದೆ. ಅದನ್ನು ತೆಗೆಯುವುದಕ್ಕೆ ನಿಮ್ಮ ಕಡೆಯಿಂದ ಪ್ರಾಮಾಣಿಕ ಪ್ರಯತ್ನ ಆಗಿಲ್ಲ; ಅದು ಹಾಗೆಯೇ ನಿಂತಿದೆ. ಆ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕೇ ಹೊರತು, ಇವತ್ತು ಯಾರೋ ಒಬ್ಬ ವ್ಯಕ್ತಿ ಸರಿಯಾಗಿ ವ್ಯವಹಾರವನ್ನು ಮಾಡುತ್ತಿಲ್ಲವೆಂದು ಅವೊಂದು ವ್ಯವಹಾರವನ್ನೆ ನಿಲ್ಲಿಸುವುದಕ್ಕೆ ತಾವು ಹೋಗಬಾರದು. ಮಾನ್ಯ ಮಂತ್ರಿಗಳು ಉತ್ತರದಲ್ಲಿ "ಮದ್ಯ ತಯಾರಿಕೆಯಲ್ಲಿ ಹೆಚ್ಚಿನ ಇಳಿತವೇನೂ ಇರುವುದಿಲ್ಲ. 1989–90 ನೇ ಸಾಲಿನಲ್ಲಿ ಮದ್ಯ ತಯಾರಿಕೆಯು 262.76 ಲಕ್ಷ ಲೀಟರ್‌ಗಳಿದ್ದು, ಈ ವರ್ಷ ಅದೇ ಅವಧಿಯಲ್ಲಿ 207.67 ಲಕ್ಷ ಲೀಟರ್‌ಗಳಾಗಿರುತ್ತವೆ..... ರಾಜ್ಯದ ಹೊರಗಿನ ಮಾರಾಟ ಕಳೆದ ವರ್ಷ 184 ಲಕ್ಷ ಲೀಟರ್‌ಗಳಿದ್ದು ಅದು ಈ ವರ್ಷ 84 ಲಕ್ಷ ಲೀಟರ್‌ಗಳಿಗೆ ಇಳಿದಿದೆ" ಎಂದು ಹೇಳಿದ್ದಾರೆ. ಆದಕ್ಕೋಸ್ಕರ ನಾನು ಒತ್ತಾಯ ಮಾಡುತ್ತಿದ್ದೇನೆ, ನೀವು ಬಿಗಿ ತನ್ನಿ. ಎಂ. ಎಸ್. ಐ. ಎಲ್. ನಿಂದ ಮದ್ಯವನ್ನು ವಿತರಣೆ ಮಾಡುವ ವ್ಯವಸ್ಥೆಯನ್ನು ಮಾಡಿ. ಸರ್ವೋಚ್ಚ ನ್ಯಾಯಾಲಯದಲ್ಲಿರುವ ಸ್ಟೇ ಅನ್ನು ವೆಕೇಟ್ ಮಾಡಿಸಿ ಕಾನೂನು ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೇ ಹೊರತು ಈ ವ್ಯವಹಾರವನ್ನು ನಿಲ್ಲಿಸುವುದು ಸರಿಯಲ್ಲ. ಡಿಸ್ಟಿಲರಿಗಳನ್ನು ಬಂದ್ ಮಾಡಿದರೆ ಅಲ್ಲಿರುವ ನೌಕರರಿಗೆ ತೊಂದರೆಯಾಗುವ ಕೆಲಸವನ್ನು ಮಾಡಬೇಡಿ. ಅವೊತ್ತು ಎಷ್ಟು ಜನ ನೌಕರರು ಇದ್ದರು, ಇವತ್ತು ಅವರು ಎಷ್ಟಕ್ಕೆ ಇಳಿದಿದ್ದಾರೆ ಎನ್ನುವುದನ್ನು ಹೇಳಬೇಕು. ಇನ್ನೊಂದು ಕಿವಿಮಾತು ಕೇಳುತ್ತಿದ್ದೇನೆ. ಅದೇನೆಂದರೆ ಹೊಸದಾಗಿ ಡಿಸ್ಟಿಲರಿಗಳನ್ನು ತೆರೆಯುವುದಕ್ಕೆ ಸರ್ಕಾರ ಅನುಮತಿಯನ್ನು ಕೊಡುವುದಕ್ಕೆ ಹೊರಟಿದೆಯೆಂದು ಗೊತ್ತಾಗಿದೆ. ಒಟ್ಟು 23 ಡಿಸ್ಟಿಲರೀಸ್‌ಗಳಿಗೆ ಅನುಮತಿ ಕೊಡುವುದಕ್ಕೆ ಹೊರಟಿದ್ದಾರೆ. ಅದರ ಬಗ್ಗೆ ಸರ್ಕಾರದ ನಿಲುವೇನು ? ಈ ಬಗ್ಗೆ ಆ ಕಡೆಯಿಂದ ಪ್ರಯತ್ನ ನಡೆಯುತ್ತಿದೆ. ಗ್ರಾಹಕರ ಹಿತದೃಷ್ಟಿಯಿಂದ ಈ ಉದ್ಯಮಗಳು ಇಲ್ಲಿ ಉಳಿಯಬೇಕೆನ್ನುವ ದೃಷ್ಟಿಯಿಂದೇ ಏನು ಶುಲ್ಕ ಜಾಸ್ತಿ ಮಾಡಿದ್ದೀರಿ ಅದನ್ನು ಕಡಿಮೆ ಮಾಡುವ ಅಗತ್ಯವಿದೆ. ಸೆಕೆಂಡ್ಸ್ ಆಗದ ರೀತಿಯಲ್ಲಿ ಅದನ್ನು ತಡೆಗಟ್ಟುವುದಕ್ಕೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಎಲ್ಲಾ ವ್ಯವಹಾರಗಳಲ್ಲೂ ಇದೆ. ರೀತಿ ಆಗಬಹುದು. ಅದು ಒಂದರಿಂದ ನೂರು ಪಟ್ಟು ಆಗುತ್ತದೆ. ಏಕೆಂದರೆ ಮಾರ್ಕೆಟ್ ಡಾನ್ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರ ಈ ರೀತಿ ಏರಿಸುತ್ತಾ ಹೋಗುತ್ತೇವೆ. ಉದ್ಯಮಿಗಳೆಲ್ಲ ಈ ರಾಜ್ಯವನ್ನು ಬಿಟ್ಟು ಹೋಗುವ ಹಾಗೆ ಮಾಡುತ್ತೇವೆ ಎನ್ನುವುದಕ್ಕೆ ಅರ್ಥವಿಲ್ಲ. ಆ ದೃಷ್ಟಿಯಿಂದ ವಿಶೇಷವಾಗಿ ಸ್ಪಷ್ಟವಾದ ಹೇಳಿಕೆಯನ್ನು ಮಾನ್ಯ ಮಂತ್ರಿಗಳಿಂದ ನಾನು ನಿರೀಕ್ಷೆ ಮಾಡುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತುಂಬಿರತಕ್ಕ ಗಮನ ಸೆಳೆಯುವ ಸೂಚನೆಗೆ ಮಾನ್ಯ ಸಚಿವರು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ನಾನು ಒಂದು ವಿಚಾರವನ್ನು ಒಪ್ಪಬೇಕು. ನಮ್ಮ ಹೇಳಿಕೆಯಲ್ಲಿ ಕೆಲವು ವಾಸ್ತವಾಂಶ ವಿಷಯಗಳನ್ನು ಇಟ್ಟಿದ್ದೇವೆ. ಒಂದು

ನೀತಿಯನ್ನು ಪ್ರಕಟ ಮಾಡಿದಾಗ, ನಾವು ಒಂದೇ ಒಂದು ಉದ್ದೇಶವನ್ನು ಇಟ್ಟುಕೊಳ್ಳುತ್ತೇವೆ. ನಮ್ಮ ರಾಜ್ಯದ ಬೊಕ್ಕಸಕ್ಕೆ ಸರಿಯಾದ ವರಮಾನ ಬರಬೇಕು ಎನ್ನತಕ್ಕದ್ದು, ಹಾಗೆ ವರಮಾನ ಬರಬೇಕಾದ ಸಂದರ್ಭದಲ್ಲಿ ಉತ್ಪಾದನೆ ಆದು ಮೊಲಾಸಸ್ ಇರಬಹುದು, ಆದು ಪ್ರಾರಂಭವಾಗುವುದೇ ಶುಗರ್ ಫ್ಯಾಕ್ಟರಿಗಳಿಂದ; ಆನಂತರ ಡಿಸ್ಟಿಲರೀಸ್‌ಗಳಿಂದ ಅವು ಎಷ್ಟು ಇವೆ ಎನ್ನುವ ಅಂಕಿ ಅಂಶಗಳು ಪ್ರತ್ಯೇಕ. ಅದಕ್ಕೆ ಸಂಬಂಧಪಟ್ಟ ಹಾಗೆ ಎಂಪ್ಲಾಯ್‌ಮೆಂಟ್ ಜನರೇಟ್ ಆಗಿರತಕ್ಕದ್ದು, ಅದಕ್ಕೆ ತೊಂದರೆಯಾಗಬಾರದು. ಆನಂತರ ವಹಿವಾಟು ಹೇಗೆ ನಡೆಯಬೇಕು ಎನ್ನತಕ್ಕದ್ದು, ಶುಲ್ಕ ನಿಲ್ಲಿಸತಕ್ಕ ಸಂದರ್ಭದಲ್ಲಿ ಯಾವ ಒಂದು ನೀತಿಯನ್ನು ಅನುಸರಿಸಬೇಕು ಎನ್ನತಕ್ಕ ವಿಚಾರವಿದೆ. ಮುಖ್ಯವಾಗಿ ನಾನು ಮೊಲಾಸಸ್ ವಿಚಾರ ಹೇಳಬೇಕು. ಈ ರಾಜ್ಯದಲ್ಲಿ ನಾವು ಅನೇಕ ಸಕ್ಕರೆ ಕಾರ್ಖಾನೆಗಳನ್ನು ಹೊಂದಿದ್ದೇವೆ. ಅಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮೊಲಾಸಸ್ ಉತ್ಪಾದನೆ ಮಾಡುತ್ತಿದ್ದೇವೆ. ಕೆಲವು ಸಕ್ಕರೆ ಕಾರ್ಖಾನೆಗಳು ಮೊಲಾಸಸ್‌ನಿಂದ ಲಾಭಾಂಶವನ್ನು ಕೂಡ ಲೆಕ್ಕಕ್ಕೆ ತೆಗೆದು ಕೊಳ್ಳತಕ್ಕ ವಿಚಾರ ಅದರಲ್ಲಿ ಅಡಗಿದೆ. ಆ ಮಾತನ್ನು ಯಾರೂ ಕೂಡ ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ನಾನು ಒಪ್ಪುತ್ತೇನೆ. ಮೊಲಾಸಸ್ ಹೆಚ್ಚಾಗಿ ಉತ್ಪಾದನೆಯಾಗಿ ಡಿಸ್ಟಿಲರೀಸ್‌ಗಳು ಗೌರ್ನಮೆಂಟ್‌ನದು ಇರಬಹುದು, ಪ್ರೈವೇಟ್‌ನವರದು ಇರಬಹುದು, ಆದು ಖರ್ಚಾಗದಿದ್ದರೆ ಸಹಜವಾಗಿ

it will be a burden on that particular sugar factory.

ಆದು ಬಂದೇ ಬರುತ್ತದೆ. ಆಮೇಲೆ ಆ ಮೊಲಾಸಸ್ ತೆಗೆದುಕೊಂಡು ಏನು ಮಾಡಬೇಕು ಎನ್ನತಕ್ಕ ಪ್ರಶ್ನೆ ಸಹಜವಾಗಿ ಶುಗರ್ ಫ್ಯಾಕ್ಟರಿಗಳಲ್ಲಿ ಬರುತ್ತದೆ ಎನ್ನತಕ್ಕ ಮಾತನ್ನು ಯಾರಾದರೂ ಒಪ್ಪಲೇಬೇಕಾಗುತ್ತದೆ. ನಾಳೆ ಎಷ್ಟು ಪರ್ಸೆಂಟೇಜ್ ರಿಕವರಿ ಇದೆ, ಆದರ ಆಧಾರದ ಮೇಲೆ ಶುಗರ್‌ಕೇನ್ ರೇಟ್ ಫಿಕ್ಸ್ ಮಾಡ ಬೇಕಾಗುತ್ತದೆ. ಮೊಲಾಸಸ್ ಲಾಸ್ ಆಗುವುದಾದರೆ ಹೆಚ್ಚು ರೇಟ್ ಕೊಡುವುದಕ್ಕಾಗುವುದಿಲ್ಲ. ಆಪಾಯಿಂಟನ್ನೂ ಕೂಡ ಕೌಂಟ್ ಮಾಡುತ್ತಾರೆ. ಎಷ್ಟೋ ಸಾರಿ ಶುಗರ್‌ಕೇನ್ ರೇಟ್ ಫಿಕ್ಸ್ ಮಾಡುವ ಸಂದರ್ಭದಲ್ಲಿ ಈ ವಿಚಾರವನ್ನು ಗಮನದಲ್ಲಿಟ್ಟೇ ನಾವು ನೋಡಿರತಕ್ಕ ಸಂದರ್ಭವಿದೆ. ಏಕೆಂದರೆ, ನಮ್ಮ ಪ್ರೊಫೆಸರ್ ರವರು ಇಲ್ಲೇ ಇದ್ದಾರೆ. ಅವರು ಯಾವಗಲೂ ಹೇಳುತ್ತಿರುತ್ತಾರೆ. ಮೊಲಾಸಸ್ ಬೇಕಾದಷ್ಟು ಉತ್ಪಾದನೆ ಆಗುತ್ತದೆ. ನಮ್ಮ ರೈತರಿಗೆ ರೇಟನ್ನು ಕೊಡುವುದಿಲ್ಲ ಎಂದು ಹೇಳಿರುವುದನ್ನು ನಾವೆಲ್ಲರೂ ಕೇಳಿದ್ದೇವೆ. ಆದ್ದರಿಂದ ಮೊಲಾಸಸ್ ಉತ್ಪಾದನೆ ಏನಿದೆ ಆದು ಕುಂಠಿತವಾಗದ ಹಾಗೆ ನೋಡಿಕೊಳ್ಳಬೇಕು. ಇವತ್ತು ಶುಗರ್ ಫ್ಯಾಕ್ಟರಿಗಳು ಸಹಕಾರಿ ಕ್ಷೇತ್ರದಲ್ಲಿಯೇ ಇರಲಿ ಅಥವಾ ಖಾಸಗಿ ಕ್ಷೇತ್ರದಲ್ಲಿಯೇ ಇರಲಿ ಆದು ಏನೇ ಇರಲಿ, ಇವತ್ತು ಇಂಡಸ್ಟ್ರಿಗಳು ಕರ್ನಾಟಕ ರಾಜ್ಯದಲ್ಲಿ ಬರುವುದಕ್ಕೆ ಖಾಸಗಿಯವರಿಗೆ ನಾವು ಆಹ್ವಾನವನ್ನು ಕೊಡುತ್ತೇವೆ. ಒಂದೆ ಒಂದು ಕಾಲವಿತ್ತು. ಮಾನ್ಯ ನಿಜಲಿಂಗಪ್ಪನವರ ಕಾಲದಲ್ಲಿ ನಮ್ಮಲ್ಲಿ ಕೈಗಾರಿಕೆಗಳನ್ನು ಮಾಡಿರಿ ಎಂದು ಕಲ್ಕತ್ತಾಕ್ಕೆ ಹೋಗಿ ಕರೆದುಕೊಂಡು ಬರುವ ಪರಿಸ್ಥಿತಿ ಇತ್ತು. ಇವತ್ತು ನಾವು ಕರೆಯುವ ಹಾಗೆ ಇಲ್ಲ. ಏಕೆಂದರೆ ನಮಗೆ ವಿದ್ಯುಚ್ಛಕ್ತಿ ಸಾಕಾಗುವುದಿಲ್ಲ ಎನ್ನುವ ದೃಷ್ಟಿಯಿಂದ ನಾವು ಸುಮ್ಮನಿದ್ದೇವೆ. ಆದರೆ ಖಾಸಗಿ ಕ್ಷೇತ್ರದಲ್ಲಿ ಅಥವಾ ಸರ್ಕಾರಿ ವಲಯದಲ್ಲಿ ಉದ್ಯಮಗಳನ್ನು ರಚನೆ ಮಾಡುವುದಕ್ಕೆ ಯಾವಾಗಲೂ ಆಹ್ವಾನವನ್ನು ಕೊಡಬೇಕು. ಆಹ್ವಾನ ಕೊಟ್ಟಿರುವವರಿಗೆ ಸರಿಯಾಗಿ ನೋಡಿಕೊಳ್ಳಬೇಕು, ಅವರಿಗೆ ವ್ಯವಸ್ಥೆಯನ್ನು ಕೂಡ ಮಾಡಬೇಕು ಎಂಬ ಮೂಲ ವಿಚಾರವನ್ನು ನಾವು ಮಾಡಿದರೆ ಅದರಿಂದ ಲಾಭ ಹಲವಾರು ವಿಚಾರಗಳಲ್ಲಿ ಇದೆ. ಪ್ರೊಡಕ್ಷನ್ ಓರಿಯಂಟೆಡ್ ಏನೇನು ನಮ್ಮ ಥಿಂಕಿಂಗ್ ಇರುತ್ತದೆ ಅದು ಕೊನೆಗೆ ಪ್ರೊಡಕ್ಷನ್ ಹೆಚ್ಚಾದಾಗ ಇಂಡಸ್ಟ್ರೀಸ್ ಸೆಕ್ಟಾರ್‌ನಲ್ಲಿ, ಏಕನಾಮಿಕ್ ಗ್ರೋತ್‌ನಲ್ಲಿ ನಮಗೆ ಬಹಳ ಕಾಂಟ್ರಿಬ್ಯೂಟ್ ಮಾಡುತ್ತಿದೆ ಎನ್ನತಕ್ಕ ವಿಚಾರವನ್ನು ನಾವು ಗಮನಿಸಬೇಕು. ಈಗ ಒಂದು ನೀತಿಯ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೇನೆ.

ಮೊಲಾಸಸ್ ಉತ್ಪಾದನೆ ಮಾಡುವುದನ್ನು ಮತ್ತು ಎಕ್ಸಪೋರ್ಟ್ ಮಾಡುವುದನ್ನು ಕಮಿಷ ಮಾಡಿದರೆ ಐ. ಐ. ಎಫ್. ಎಲ್. ಅನ್ನು ಇಟ್ಟುಕೊಂಡು, ಮೊಲಾಸಸ್ ಇಟ್ಟುಕೊಂಡು ಏನು ಮಾಡಬೇಕೆನ್ನುವ ಪ್ರಶ್ನೆ ಬರುತ್ತದೆ. ಆದ್ದರಿಂದ ಇಂಡಸ್ಟ್ರಿಗಳಲ್ಲಿ, ಶುಗರ್ ಫ್ಯಾಕ್ಟರಿಗಳಲ್ಲಿ ಉತ್ಪಾದನೆಯಾಗತಕ್ಕದ್ದು ಪಾಳಾಗದ ಹಾಗೆ ನೋಡಿಕೊಳ್ಳಬೇಕು, ಆದಷ್ಟು ಉತ್ಪಾದನೆ ನಿಲ್ಲುಬಾರದು ಎನ್ನತಕ್ಕ ನೀತಿಯನ್ನು ಸರ್ಕಾರ ಇಟ್ಟುಕೊಂಡಿದೆ. ಆ ನೀತಿಯನ್ನು ಮುಂದುವರಿಸುತ್ತದೆ. ಇನ್ನೂ ಕೆಲವು ಶುಗರ್ ಫ್ಯಾಕ್ಟರಿಗಳು ಆಗಬೇಕೆಂದು ಶಿಫಾರಸು ಕೂಡ ಕೇಂದ್ರ ಸರ್ಕಾರಕ್ಕೆ ಹೋಗಿದೆ. ಮೊಲಾಸಸ್ ಉತ್ಪಾದನೆಯಾಗತಕ್ಕ ಘಟಕಗಳು ಅಂತಹ ಸಕ್ಕರೆ ಕಾರ್ಖಾನೆಗಳಲ್ಲಿ ಬರತಕ್ಕ ಸಂದರ್ಭಗಳು ಬರುತ್ತವೆ ಇದು ಒಂದು ಭಾಗ ಇನ್ನೊಂದು ವಿಚಾರ ಏನೆಂದರೆ, ಇನ್ನು ಮುಂದೆ ಫ್ಯಾಕ್ಟರಿಗಳು ಬರುತ್ತವೆ ಅವು ಬಂದಮೇಲೆ ಏನು ಮಾಡಬೇಕೆನ್ನುವ ಪ್ರಶ್ನೆ ಇದೆ. ಇವತ್ತು ಏನು ಉತ್ಪಾದನೆ ಆಗುತ್ತದೆ ಆದು ಸೇಲ್ ಆಗದೆ ಹಾಗೆಯೇ ಉಳಿದರೆ ಏನಾಗುತ್ತದೆ ಎನ್ನುವ ಪ್ರಶ್ನೆಯನ್ನು ಅವರು ಎತ್ತಿದ್ದಾರೆ. ಡಿಸ್ಟಿಲರಿಗಳು ಮುಚ್ಚಿಹೋದರೆ ನೌಕರರನ್ನು ತೆಗೆದುಹಾಕತಕ್ಕದ್ದು.

That is also another point which has to be taken into account. I will agree with that approach.

ಆದರೆ ಇಲ್ಲಿ ಸರ್ಕಾರ ಸಂಪೂರ್ಣವಾಗಿ ಹೋಗಿದೆ ಎನ್ನುವ ಭಾವನೆಯನ್ನು ನಾವೇನು ಇಟ್ಟುಕೊಂಡಿಲ್ಲ. ಒಂದೆರೆಡು ಫ್ಯಾಕ್ಟರಿಗಳು ಮುಚ್ಚಿದ್ದರೆ ಬೇರೆ ಬೇರೆ ಕಾರಣಗಳಿಂದ ಮುಚ್ಚಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆ. ಆದರೆ ಅಲ್ಲಿ ಉತ್ಪನ್ನ ಆಗುತ್ತಿರುವ ಐ. ಎಂ. ಎಫ್. ಎಲ್. ಮಾರಾಟವಾಗದಿದ್ದರೆ, ನಮ್ಮ ರಾಜ್ಯದಿಂದ ಅದು ಎಕ್ಸ್‌ಪೋರ್ಟ್ ಆಗದಿದ್ದರೆ, ನಾಳೆ ಆ ಡಿಸ್ಟಿಲರೀಸ್‌ನ್ನು ಮುಚ್ಚತಕ್ಕ ಸಂದರ್ಭ ಬರಬಹುದು ಎನ್ನುವ ವಾದವನ್ನು ನಾವು ತಳ್ಳಿಹಾಕುವುದಕ್ಕೆ ಆಗುವುದಿಲ್ಲ. To that extent, I agree, ಅದಕ್ಕೆ ಏನು ಮಾಡಬೇಕು ? ಅದು ಮಾರಾಟವಾಗಬೇಕಾದರೆ ಅದಕ್ಕೆ ಮಾರಾಟದ ವಾತಾವರಣ ಸೃಷ್ಟಿಯಾಗ ಬೇಕೆಂದು ತಮ್ಮೆಲ್ಲರ ಅಭಿಪ್ರಾಯ. ಅದನ್ನು ಮಾರಾಟ ಮಾಡುವಾಗ ಅತಿ ಕಡಿಮೆ ದರ ಇಟ್ಟರೆ ಮಾರಾಟ ವಾಗುತ್ತದೆ ಎಂದು ನಾವು ಭಾವಿಸುವುದಕ್ಕಾಗುವುದಿಲ್ಲ. ಬರೀ ಅದು ಒಂದೇ ಪಾಯಿಂಟ್ ಮೇಲೆ ಹೋಗುವು ದಕ್ಕೆ ಆಗುವುದಿಲ್ಲ ಅದನ್ನು ಕೂಡ ನಾವು ವಿಚಾರ ಮಾಡಬೇಕು. ಮಾನ್ಯ ದೇಶಪಾಂಡೆಯವರು ಹೇಳಿದಹಾಗೆ ಬೇರೆ ಬೇರೆ ರಾಜ್ಯಗಳಲ್ಲಿ ಒಂದು ಕಾಲದಲ್ಲಿ 8 ಆಣೆ, 12 ಆಣೆ, 1ರೂಪಾಯಿ ಇತ್ತು. ಮೊದಲು ನಮ್ಮದು ಕೂಡ 1 ರೂಪಾಯಿಇತ್ತು. ನಾವು ಅದನ್ನು 20 ರೂಪಾಯಿಗೆ ಏರಿಸಿದ್ದೇವೆ. ಇದರಲ್ಲಿ ಎರಡು ಚಿಂತನೆಯಿದೆ. ಎಕ್ಸ್‌ಪೋರ್ಟ್ ಮಾಡತಕ್ಕೆ ಸಂದರ್ಭದಲ್ಲಿ ಹೆಚ್ಚಿನ ರೇಟನ್ನು ಹಾಕಿದರೆ ಹೆಚ್ಚಿನ ಆದಾಯ ಬರುತ್ತದೆನ್ನುವ ವಾದ ಒಂದು. ಮತ್ತೊಂದು ವಾದ ಏನೆಂದರೆ, ನಾವು ಕಡಿಮೆ ಡ್ಯೂಟಿ ಹಾಕಿದರೆ ಹೆಚ್ಚಾಗಿ ಮಾರಾಟ ಮಾಡಬಹುದು ಎನ್ನುವುದು. These are the only two ways.

ಶ್ರೀ ಡಿ. ಬಿ. ಚಂದ್ರೇಗೌಡ :– ಮಾನ್ಯ ಮುಖ್ಯಮಂತ್ರಿಗಳು ಒಂದು ನಿಮಿಷ ಈಲ್ಲಾದರೆ ಹೇಳುತ್ತೇನೆ. according to your own statement exports have fallen consi-derably to the extent of 1/4th.

ಶ್ರೀ ಎಸ್. ಬಂಗಾರಪ್ಪ :– ನಾನು ಇದನ್ನು ಒಪ್ಪುತ್ತೇನೆ. ಕೆಲವು ವಿಚಾರದಲ್ಲಿ ಬಹಳ ಡ್ರಾಪ್ ಆಗಿದೆ ಎನ್ನತಕ್ಕ ಮಾತನ್ನು ನಾನು ಒಪ್ಪಬೇಕು. ಸ್ಟೇಟ್‌ಮೆಂಟಿನ ಮೊದಲನೆ ಪುಟದ ಕೊನೆಯಲ್ಲಿ

ರಾಜ್ಯದ ಹೊರಗಿನ ಮಾರಾಟ ಕಳೆದ ವರ್ಷ 184 ಲಕ್ಷ ಲೀಟರ್‌ಗಳಿದ್ದು ಅದು ಈ ವರ್ಷ 84 ಲಕ್ಷ ಲೀಟರ್‌ಗಳಿಗೆ ಇಳಿದಿದೆ' ಎಂದು ಇದೆ.

ಅಂದರೆ ಈಗ 20ರೂಪಾಯಿ ಎಕ್ಸೈಸ್ ಡ್ಯೂಟಿ ಏನಿದೆ, ಅದು ಜಾಸ್ತಿಯಾಯಿತು, ಅದಕ್ಕಾಗಿ ಡ್ರಾಪ್ ಆಗಿದೆ ಎನ್ನತಕ್ಕದ್ದು ತಮ್ಮ ಅಭಿಪ್ರಾಯ. ರಾಜ್ಯದಲ್ಲಿರತಕ್ಕಂಥ 19 ಅಥವಾ 20 ಡಿಸ್ಟಲರಿಗಳಲ್ಲಿ ಕೆಲವರು ಸರ್ಕಾರಕ್ಕೆ ರೆಪ್ರೆಸೆಂಟ್ ಮಾಡಿದ್ದಾರೆ.

We are in possession of the facts and figures given by that association also. ಆದಕ್ಕೆ ನಾವು ಹೇಳಿದ್ದೇವೆ. ನೀವು ಹಾಗೆ ಹೇಳಿದಿರಿ ಎಂದು 20 ರೂಪಾಯಿ ಇದ್ದುದನ್ನು ಒಂದು ರೂಪಾಯಿಗೆ ಏಂಬಾಣಿಗೆ. ಸಾಲ್ಯಾನಿಗೆ ಇಳಿಸುವ ವಿಚಾರವನ್ನು ನಾವು ಒಂದೇ ಸಾರಿಗೆ ಮಾಡಿದರೆ ನಾಳೆ ನಮ್ಮ ರೆವಿನ್ಯೂ ಜಾಸ್ತಿಯಾಗುತ್ತದೆ ಎಂದು ಏನು ಗ್ಯಾರಂಟಿ ಇದೆ ಎಂದು ಕೇಳಿದಾಗ ಅದಕ್ಕೆ ಅವರು ಇಲ್ಲ, ಇವತ್ತು ಬೇಕಾದಷ್ಟು ಸ್ಟಾಕ್ ಇದೆ. ಏನು ಮಾಡುವುದೆಂದು ಗೊತ್ತಿಲ್ಲ. ನೀವು ಹೀಗೆ ಮಾಡಿದರೆ ನಾವು ಖಂಡಿತವಾಗಿಯೂ ಬಾಗಿಲು ಮುಚ್ಚಿಕೊಂಡು ಹೋಗುತ್ತೇವೆ ಎಂದು ಹೇಳುತ್ತಾರೆ. ಅಲ್ಲದೆ ಬೇರೆ ಬೇರೆ ರಾಜ್ಯಗಳಿಗೆ, ಮಹಾರಾಷ್ಟ್ರಕ್ಕೆ ಹೋಗತಕ್ಕಂಥ ಪ್ರಯತ್ನ ಮಾಡಿದ ವರದಿ ಕೂಡ ನಮ್ಮ ಹತ್ತಿರ ಇದೆ. ಆದರೆ ಅವರು ಸಂಪೂರ್ಣವಾಗಿ ಹೋಗಿ ಮಾಡಿಬಿಟ್ಟಿಲ್ಲ. ಅಂತಹ ಭಾವನೆಗೆ ಬರುವ ಅವಶ್ಯಕತೆ ಇಲ್ಲ. ಆದರೆ ನಾಳೆ ಆಗಬಹುದು ಎನ್ನತಕ್ಕಂಥ ಅನಿಸಿಕೆ ಬಗ್ಗೆ ವಿಚಾರ ಮಾಡಬೇಕೆನ್ನುವುದನ್ನು ನಾನು ಒಪ್ಪುತ್ತೇನೆ. ಅದಕ್ಕಾಗಿ ಆದಾಯದ ದೃಷ್ಟಿಯಿಂದ 20 ರೂಪಾಯಿ ರೇಟು ಏರಿರುವುದರಿಂದ ನಮಗೆ ಆದಾಯ ಬಂದಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇವೆ. because of the higher duty. that is all the point. ಡ್ಯೂಟಿ ಕಡಿಮೆ ಮಾಡಿದರೆ ಸೇಲ್ಸ್ ಸಿಕ್ಕಾಪಟ್ಟೆ ಜಾಸ್ತಿಯಾಗುತ್ತದೆ; ಆಗ ಆದಾಯ ಇದಕ್ಕಿಂತ ಜಾಸ್ತಿಯಾಗುತ್ತದೆ ಎನ್ನತಕ್ಕದ್ದು ತಮ್ಮ ಅಭಿಪ್ರಾಯ. That is a matter for consideration. ಅದು ಪಾಸಿಟೀವ್ ಸೈಡ್ ಎನ್ನತಕ್ಕಂಥ ಭಾವನೆಯನ್ನು ನಾನು ಒಪ್ಪುತ್ತೇನೆ. ಇದರಲ್ಲಿ 36 ಕೋಟಿ ರೂಪಾಯಿ ಇತ್ತು, ಅದರಲ್ಲಿ 9 ಕೋಟಿ ರೂಪಾಯಿ ಇಳಿದು ಹೊರಟು ಹೋಗಿದೆ; ಅದು ಕೂಡ ಬರುತ್ತದೋ ಇಲ್ಲವೋ ಎನ್ನತಕ್ಕಂಥ ಅಭಿಪ್ರಾಯ ಇದೆ. ನಮಗೆ ಇನ್ನೂ ಕೂಡ ಮಾರ್ಚ್ ವರೆಗೆ ಹಣಕಾಸಿನ ವರ್ಷ ಇದೆ. ಆಷ್ಟರಲ್ಲಿ ಆದಾಯ ಬರಬಹುದೆಂಬ ನಿರೀಕ್ಷೆ ಇದೆ. ಈಗಾಗಲೇ ಡ್ರಾಪ್ ಆಗಿದೆ, ನೀವು ಹೇಗೆ ಆದಾಯ ನಿರೀಕ್ಷೆ ಮಾಡುತ್ತೀರಿ ಎನ್ನತಕ್ಕದ್ದು ತಮ್ಮ ಪ್ರಶ್ನೆ ಇರಬಹುದು. perhaps thinking that you might be putting that question.

ಶ್ರೀ ಡಿ. ಬಿ. ಚಂದ್ರೇಗೌಡ :– ಸರ್ಕಾರ ಕೊಟ್ಟಿರುವ ಈ ಸ್ಟೇಟ್‌ಮೆಂಟಿನಲ್ಲಿ 1989–90 ಏಪ್ರಿಲ್ ನಿಂದ ನವೆಂಬರ್‌ವರೆಗೆ ವರಮಾನ 42.5 ಕೋಟಿ; ಈ ವರ್ಷ ಅದೇ ಅವಧಿಯಲ್ಲಿ ವರಮಾನ 62 ಕೋಟಿ ಎಂದು ಇದೆ. ಅಂದರೆ ನಿಮಗೆ 20 ಕೋಟಿ ಜಾಸ್ತಿ ಬಂದಿದೆ. 42 ಕೋಟಿ ಇದ್ದದ್ದು ಎಷ್ಟು ಬರಬೇಕಿತ್ತು ? ವಾಮಾಷಾ ಲೆಕ್ಕ ಹಾಕುವಾಗ ಬರೇ ಇಲ್ಲಿ 20 ಕೋಟಿ ಜಾಸ್ತಿ ಬಂದುಬಿಟ್ಟಿದೆ ಎಂದರೆ ಸಮಾಧಾನ ಆಗುತ್ತದೆ ಎಂದಲ್ಲ. The very question is 20 times it should nave been more. From 42 cross i should have been in creased. to 20 times. you have improved only 50% of the total revenus i. e. 42.5. ಅರ್ಧ ಅಂದರೆ ಇನ್ನು 20 ಕೋಟಿ ಜಾಸ್ತಿ ಮಾಡಿದ್ದೀರಿ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ :– ರೈತರಿಗೆ ಸಾಲ ಮನ್ನಾ ಮಾಡುವುದಕ್ಕೆ ಇವರಿಗೆ ಆಗುತ್ತಿಲ್ಲ. ಏಕೆ ಕಡಿಮೆ ಮಾಡುತ್ತೀರಿ, ಒಂದಿಷ್ಟು ಜಾಸ್ತಿಮಾಡಿಕೊಂಡು ಹೋಗಲಿ; ಈ ಡಿಸ್ಟಲರಿಗಳನ್ನು ಕಟ್ಟಿಕೊಂಡು ನಮಗೇನು ಆಗಬೇಕಾಗಿದೆ ? ಈಗ ರೈತರಿಗೆ ಸಾಲ ಮನ್ನಾ ಮಾಡಿ ಎಂದು ನಾವು ಬಡಿದುಕೊಳುತ್ತಾ ಇದ್ದೇವೆ. ಒಂದ ಪೈಸೆಯನ್ನೂ ಮನ್ನಾ ಮಾಡುವುದಕ್ಕೆ ಆಗಿಲ್ಲ. ಈಗ 20 ರೂಪಾಯಿ ಜಾಸ್ತಿಯಾಗಿದೆ ಎಂದು ಇಷ್ಟು ವೀರ್ಥ ಚರ್ಚೆ ಮಾಡಿ ಅವು 20 ಡಿಸ್ಟಲರೀಸ್ ಮುಚ್ಚಿಹೋದರೂ ನಾವ್ಯಾಕೆ ತಲೆಕೆಡಿಸಿಕೊಳ್ಳೋಣ ? ಸುಮ್ಮನೆ ಬಿಟ್ಟು ಬಿಡೋಣ. ಸುದೀರ್ಘವಾಗಿ ಚರ್ಚೆ ಏಕೆ ಬೇಕು ? ಒಂದಿಪ್ಪತ್ತು ಡಿಸ್ಟಲರಿಗಳು ಮುಚ್ಚಿಬಿಟ್ಟರೆ ನಮ್ಮ ದೇಶಕ್ಕೇನೂ ಅನ್ಯಾಯ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ :– ನಾಗರಾಜ್ ರಾಯರೇ, ಓ, ರಾಯರಲ್ಲ, ಕ್ಷಮಿಸಿ...

ಅಧ್ಯಕ್ಷರು :– ಅಲ್ಲ, ಇದ್ಯಾಕೋ ಕೋರ್ಟಿನಲ್ಲಿ ಹಾಸ್ಟೈಲ್ ವಿಟ್‌ನೆಸ್ ಆದಹಾಗೆ ಆಗಿಹೋಯ್ತಲ್ಲ. ತಾವು ಗಮನ ಸೆಳೆಯುವ ಸೂಚನೆಗೆ ಸಹಿಹಾಕಿಬಿಟ್ಟು.....

ಶ್ರೀ ವಾಟಾಳ್ ನಾಗರಾಜ್ :– ನಾನು ಸಹಿ ಹಾಕಿಲ್ಲ. ಎಲ್ಲಿ ಹಾಕಿದ್ದೀನಿ ಹೇಳಿ, ತೋರಿಸಿ ಕೊಡಿ ತಾವು

ಶ್ರೀ ಎಸ್. ಬಂಗಾರಪ್ಪ :– ಶ್ರೀ ನಾಗರಾಜ್‌ರವರೇ, ಈಗ 20 ರೂಪಾಯಿ ಎಕ್ಸೈಜ್ ಡ್ಯೂಟಿ ಮಾಡಿರತಕ್ಕ ಬಗ್ಗೆ ನೀವು ಪೂರ್ತಿಯಾಗಿ ಕೇಳಿ. ಪ್ರಶ್ನೆ ಕೇಳಿ ಆ ಕಡೆಗೆ ತಿರಗಿ ಬಿಟ್ಟರೆ ಹೇಗೆ ? ನಾವು 20ರೂ. ಜಾಸ್ತಿ ಮಾಡಿದ್ದೇವೆ. ಇದನ್ನು ಕಡಿಮೆ ಮಾಡಿದರೆ ಡಿಸ್ಟಿಲರಿ ಓನರುಗಳ ಹೊಟ್ಟೆ ತುಂಬುತ್ತದೆ ಎನ್ನತ್ತಕ್ಕ ಅಭಿಪ್ರಾಯ ಇಟ್ಟುಕೊಂಡು ತಾವು ಮಾತನಾಡುತ್ತಿದ್ದೀರಿ. ಆದರೆ ಇಲ್ಲಿ ಆ ವಿಷಯ ಇಲ್ಲ. ಸೇಲ್ಸ್ ಜಾಸ್ತಿ ಯಾದರೆ ಅಂದರೆ ಈ ರಾಜ್ಯದಿಂದ ಹೊರಗಡೆ ಹೊರಟುಹೋದರೆ, ನಮಗೆ ಆದಾಯ ಜಾಸ್ತಿ ಬರುತ್ತದೆ. ಕೋಟಿಗಟ್ಟಲೆ ರೆವಿನ್ಯೂ ಖಜಾನೆಗೆ ಬರುತ್ತದೆ, ನಾಳೆ ರೈತರ ಸಾಲ ಮನ್ನಾ ಮಾಡಬಹುದು ಎಂಬ ಅಭಿಪ್ರಾಯ ಇಟ್ಟು ಮಾನ್ಯ ಸಿದ್ಧರವರು, ವಿರೋಧ ಪಕ್ಷದ ನಾಯಕರು ಮತ್ತೊಬ್ಬರು ಹೇಳಿರತಕ್ಕಂಥ ವಿಚಾರ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ರೈತರ ಸಾಲ ಮನ್ನಾ ಮಾಡುತ್ತೇವೆಂದು ಹಿಂದೆ ಇದ್ದವರೆಲ್ಲಾ– ಏನೇನೋ ಮಾಡಿದರು. ನೀವೂ ಕೂಡ ಏನು ಬೇಕಾದರೂ ಮಾಡಿ, ಒಂದು ತೀರ್ಮಾನ ಮಾಡಿ. ನಮ್ಮ ರೈತ ಬದುಕಿಕೊಳ್ಳಲಿ. ಅದನ್ನಾದರೂ ಹೇಳಿ.

ಶ್ರೀ ಎಸ್. ಬಂಗಾರಪ್ಪ :– ಈ ಸಂದರ್ಭದಲ್ಲಿ ಗೋವಾ, ಕೇರಳ, ಮಹಾರಾಷ್ಟ್ರ ರಾಜ್ಯಗಳಿಗೆ ಇವರು ಹೋಗುತ್ತಾರೋ ಇಲ್ಲವೋ ನಮಗೆ ಗೊತ್ತಿಲ್ಲ. ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಇಂಡಸ್ಟ್ರೀಸ್ ಉಳಿಯ ಬೇಕೆನ್ನುವುದು ಸರ್ಕಾರದ ಆಸೆ. ನಾನು ಬರೀ ಡಿಸ್ಟಲರಿಗಳ ಪ್ರಶ್ನೆ ಮಾತನಾಡುತ್ತಿಲ್ಲ. ಕರ್ನಾಟಕ ರಾಜ್ಯದಲ್ಲಿ ಇಂಡಸ್ಟ್ರಿಯಲ್ ಸೆಕ್ಟಾರ್‌ನಲ್ಲಿ ಬರತಕ್ಕ ಯಾವುದೇ ಇಂಡಸ್ಟ್ರಿ ಇದ್ದರೂ ಕೂಡ ನಾವು ಬೆಂಬಲ ಕೊಡತಕ್ಕ ವಿಚಾರ.....

ಶ್ರೀ ವಾಟಾಳ್ ನಾಗರಾಜ್ :– ಮಿನರ್ವ ಮಿಲ್, ಕೆ. ಆರ್. ಮಿಲ್ ಮುಚ್ಚಿ 4–5 ವರ್ಷವಾಗಿದೆ. ಸಾವಿರಾರು ಜನ ಕಾರ್ಮಿಕರು ಬೀದಿಯಲ್ಲಿ ಭಿಕ್ಷೆ ಎತ್ತುತ್ತಿದ್ದಾರೆ, ಅವರನ್ನು ಕೇಳುವವರೇ ಗತಿ ಇಲ್ಲ.

ಶ್ರೀ ಎಸ್. ಬಂಗಾರಪ್ಪ :– ಆದ್ದರಿಂದ ಇಂಡಸ್ಟ್ರೀಸ್ ಬೆಳೆಯಬೇಕು, ಅವು ಇರಬೇಕು ಎನ್ನುವುದೇ ನಮ್ಮ ಸರ್ಕಾರದ ನೀತಿ. ನಾಳೆ ಅವು ಮುಚ್ಚತಕ್ಕ ಸಂದರ್ಭ ಬಂದು, ಅವರು ಏನು ಉತ್ಪಾದನೆ ಮಾಡಿದ್ದಾರೆ, ಅದನ್ನು ಸಿಕ್ಕಾಪಟ್ಟೆ ಸ್ಟಾಕ್ ಇಟ್ಟಿದ್ದಾರೆ ಎಂಬ ಕಂಪ್ಲೇಂಟ್ ಇಟ್ಟು ಮಾತನಾಡಿದ್ದೀರಿ. ಸರ್ಕಾರದಲ್ಲಿ ಕೆಲವು ಮನವಿಗಳನ್ನು ಕೊಟ್ಟಿರುವುದೂ ನಮ್ಮ ಗಮನದಲ್ಲಿದೆ. ಇವರು ಗೋವಾ, ಪಾಂಡಿಚೆರಿ ಮುಂತಾದ ಕಡೆ ಪರ್ಮಿಟ್ ಮಾಡಿಕೊಂಡು ಮನಸ್ಸಿಗೆ ಬಂದ ಹಾಗೆ ಮಾಡಿ, ನಾಳೆ ಕರ್ನಾಟಕದಲ್ಲಿ ಮಾರಾಟ ಮಾಡುವಂಥ ವಿಚಾರ ಬಂದಾಗ, ಆಗ ಏನು ಮಾಡಬೇಕೆಂಬ ಪ್ರಶ್ನೆ ಬರುತ್ತದೆ. ದಯಮಾಡಿ ಈ ಪ್ರಶ್ನೆಯನ್ನು ವಿಚಾರ ಮಾಡಬೇಕು. ನಾಳೆ ನಮಗೂ ಮೋಸ, ಎಲ್ಲರಿಗೂ ಮೋಸ ಮಾಡತಕ್ಕ ವಿಚಾರ. ಅದಕ್ಕೆ ಏನು ಸಲಹೆ ಕೊಟ್ಟಿದ್ದೀರಿ ಎಂದರೆ, ನಾವು ಮುಚ್ಚಳಿಕೆ ಕೊಡುತ್ತೇವೆ, ಗೋವಾ, ಪಾಂಡಿಚೇರಿ ಮತ್ತೊಂದು ಇಲ್ಲ ಎಂದು. ಇದು ಅಸೋಸಿಯೇಷನ್‌ಗಳು ಹೇಳಿರತಕ್ಕ ವಿಚಾರ. ನಾವು ಮಾಡಿಕೊಡುತ್ತೇವೆ ಇಲ್ಲದಿದ್ದರೆ ಬಾಗಿಲು

ಮುಚ್ಚಿಕೊಂಡು ಹೋಗುತ್ತೇವೆ, ಮಾರಾಟ ಕೂಡ ಮಾಡುವುದಕ್ಕಾಗುವುದಿಲ್ಲ ಎನ್ನತಕ್ಕಂಥ ಅಭಿಪ್ರಾಯ ಇಟ್ಟು ಹೇಳಿರತಕ್ಕಂಥ ಮಾತು ಕೂಡ ಸರ್ಕಾರದ ಗಮನದಲ್ಲಿದೆ. ಈ ಸಂದರ್ಭದಲ್ಲಿ ಇಷ್ಟು ಹೇಳಬಲ್ಲೆ.

ಶ್ರೀ ವಾಟಾಳ್ ನಾಗರಾಜ್ :– ಈ 20 ಡಿಸ್ಟಲರಿಗಳು ಹೋದರೆ ಎಷ್ಟು ಜನ ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಾರೆ, ಎಷ್ಟು ಜನ ಇರುತ್ತಾರೆ ಎನ್ನುವುದನ್ನು ದಯವಿಟ್ಟು ಹೇಳಿ. ಈ ಡಿಸ್ಟಲರೀಸ್‌ನಿಂದ ಸಾವಿರಾರು ಜನ ಕಾರ್ಮಿಕರಿಗೆ ತೊಂದರೆಯಾಗುತ್ತಿದೆ ಎಂಬುದನ್ನು ಹೇಳಿ.

ಶ್ರೀ ಎಸ್. ಬಂಗಾರಪ್ಪ :– ಆ ಪಾಯಿಂಟ್ ಇಲ್ಲಿ ಇಲ್ಲ. ಆದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ, ಉತ್ತರ ಕೊಡುತ್ತೇವೆ. ಸಾವಿರಾರು ಜನ ಇರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :– ಅದರಲ್ಲಿ ಎಷ್ಟು ಜನ ಕಾರ್ಮಿಕರು ಇದ್ದಾರೆ, ಸಾವಿರಾರು ಜನ ಕಾರ್ಮಿಕರಿಗೆ ಏನು ತೊಂದರೆಯಾಗಿದೆ, ಏನು ಅನ್ಯಾಯವಾಗಿದೆ ಎನ್ನುವುದನ್ನು ಹೇಳಿ.

ಶ್ರೀ ಎಸ್. ಬಂಗಾರಪ್ಪ :– ತಾವು ಕೇಳಬಹುದೆಂದು ಅಂದಾಜು ಮಾಡಿ ಉತ್ತರ ರೆಡಿ ಇಟ್ಟುಕೊಂಡಿದ್ದೇನೆ. ಈಗ ಡಿಸ್ಟಲರೀಸ್‌ನಲ್ಲಿ ಒಟ್ಟು 6,500 ಜನ ಕಾರ್ಮಿಕರು ಇದ್ದಾರೆ. ಬ್ರಿವರಿಗಳಲ್ಲಿ ಒಟ್ಟು ನೌಕರರು 1188 ಇದ್ದಾರೆ, ಎಲ್ಲರೂ ಸೇರಿ ಏಳು–ಏಳುಕಾಲು ಸಾವಿರ ಜನ ಆಗುತ್ತಾರೆ. ನಾಳೆ ಇಲ್ಲಿ ಕಬ್ಬನ್ ಪಾರ್ಕ್‌ಗೆ ಬರುತ್ತಾರೆ ಲೀಡರ್ಸ್ ತಮ್ಮ ಹತ್ತಿರ ಬಂದು ರೆಪ್ರಸೆಂಟೇಷನ್ ಕೊಡಿಸುತ್ತಾರೆ. ಇದನ್ನೂ ಗಮನದಲ್ಲಿಟ್ಟು ಕೊಳ್ಳಬೇಕು. ತಾವು ಮಾತನಾಡಬೇಕಾದರೆ, ಮತ್ತೊಂದು ವಿಷಯ ಹೇಳಿದಿರಿ, ಶ್ವೇತ ಪತ್ರ ಹೊರಡಿಸುತ್ತೇವೆಂದು ಹೇಳಿದಿರಿ ಎಂದು. ಇದಕ್ಕೆ ಶ್ವೇತಪತ್ರ ಎಂಥಾದ್ದು ಇಲ್ಲ, ಶ್ವೇತಪತ್ರ ಎಲ್ಲಿ ಬಂತು...

ಶ್ರೀ ವಾಟಾಳ್ ನಾಗರಾಜ್ :– ಹೌದು ತಾವು ಶ್ವೇತಪತ್ರ ಇಡುತ್ತೇವೆಂದು ಹೇಳಿದ್ದೀರಿ. ಅಬಕಾರಿ ಬಾಬುಗಳ ವಿಚಾರದಲ್ಲಿ ಶ್ವೇತಪತ್ರ ಇಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.....

ಶ್ರೀ ಬಿ. ಹೆಚ್. ಬನ್ನಿಕೋಡ್ :– ಇದು ನಾವು ಕೇಳಿದ್ದಲ್ಲ ಈ ಮಾತನ್ನು ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ.

ಅಧ್ಯಕ್ಷರು :– ಇವರು ಹೇಳಿದ್ದರೇ, ಯಾವಾಗ ಹೇಳಿದ್ದರು ? ...

ಶ್ರೀ ಬಿ. ಎಸ್. ಯಡಿಯೂರಪ್ಪ :– ಹಿಂದೆ ಶ್ರೀ ವೀರೇಂದ್ರ ಪಾಟೀಲರ ಕಾಲಕ್ಕಿಂತ ಈಗ ಹಣಕಾಸಿನ ಪರಿಸ್ಥಿತಿ ಸುಧಾರಣೆಯಾಗಿದೆ, ಇದರ ಬಗ್ಗೆ ವಿವರ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು :– ಇಲ್ಲ ಮುಖ್ಯಮಂತ್ರಿಗಳು ಮುಗಿಸಲಿ.

ಶ್ರೀ ಸಿ. ಬೈರೇಗೌಡ :– ಶ್ವೇತಪತ್ರದ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನೆ.

ಅಧ್ಯಕ್ಷರು :– ನೀವು ಪ್ರಸ್ತಾಪ ಮಾಡಿದ್ದಕ್ಕೆಲ್ಲಾ ಹೇಳುವುದಕ್ಕೆ ಆಗುವುದಿಲ್ಲ. ನಿಮ್ಮ ಹೆಸರು ಇದರಲ್ಲಿ ಇಲ್ಲ.

ಶ್ರೀ ಎಸ್. ಬಂಗಾರಪ್ಪ :– ಆ ವಿಚಾರ ನಾನು ಕವರ್ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ :– ದೆಹಲಿಯಲ್ಲಿ ತಾವು ಆ ರೀತಿ ಹೇಳಿದ್ದೀರಿ. ದೆಹಲಿಯಲ್ಲಿ ತಾವು ಶ್ವೇತಪತ್ರ ಹೊರಡಿಸುತ್ತೇನೆ, ಎಕ್ಸೈಸ್‌ನಲ್ಲಿ ಹಣ ಜಾಸ್ತಿ ಬಂದಿದೆ ಎಂದು ಹೇಳಿದ್ದೀರಿ, ಅದನ್ನು ತಮಗೆ ಜ್ಞಾಪಿಸಿಕೊಡುತ್ತೇನೆ ಅಷ್ಟೇ.

SRI S. BANGARAPPA :– You are completely mistaken

ನಾವು ಅಧಿಕಾರ ವಹಿಸಿಕೊಂಡ ಮೇಲೆ ರೆವಿನ್ಯೂ ಕಡಿಮೆ ಆಗಿಹೋಗಿದೆ ಎಂಬ ಮಾತು ಇದೆ.

not only under this excise but also commercial taxes and transport and other areas. ಎನ್ನುವ ವಿಚಾರ ಇದೆ. ಶ್ರೀ ವೀರೇಂದ್ರ ಪಾಟೀಲರ ಕಾಲದಲ್ಲೂ ಕೂಡಾ ಒಳ್ಳೆಯ ಕೆಲಸ ಆಗಿದೆ.

as far as getting more reveneue is concerned K cnerease is there.

ನಾವು ಅಧಿಕಾರ ವಹಿಸಿಕೊಂಡ ಮೇಲೆ ಯಾವುದೂ ಕೂಡ ಕಡಿಮೆ ಮಾಡಿಲ್ಲ, ಮಾಡುವುದೂ ಇಲ್ಲ ಎಂದು ಹೇಳಿದ್ದೇನೆ. ಅದು ಕೇವಲ ಅಬಕಾರಿಯದು ಅಲ್ಲ. ಅದು ಯಾವ ಪತ್ರಿಕೆಯಲ್ಲಿ ಬಂದಿದೆಯೋ ನನಗೆ ಗೊತ್ತಿಲ್ಲ. ಸಂದರ್ಭ ಬಂದರೆ ಶ್ವೇತಪತ್ರ ಇಡುವುದಕ್ಕೂ I am prepared ಎನ್ನುವ ಮಾತನ್ನು ಹೇಳಿದ್ದೇನೆ. What is wrong in it ? ಮುಂದಿನ ಫೆಬ್ರುವರಿಯಲ್ಲಿ ಬಜೆಟ ಇಡುತ್ತೇವಲ್ಲ ಆದೇ ಶ್ವೇತಪತ್ರ. ನಿಮ್ಮ ಮುಂದೆ ಇಟ್ಟುಬಿಡುತ್ತೇವೆ, ಆದರಲ್ಲಿ ಅನುಮಾನ ಬೇಕಾಗಿಲ್ಲ.

ಶ್ರೀ ಸಿ. ಬೈರೇಗೌಡ :– ಇಡಲೇ ಬೇಕಲ್ಲ.

ಶ್ರೀ ಎಸ್· ಬಂಗಾರಪ್ಪ :– ಇಡಲೇ ಬೇಕಲ್ಲ. ಇಡುತ್ತೇವೆ, ಆಗ ಆ ಪತ್ರವನ್ನೂ ಸೇರಿಸಿ ಇಟ್ಟಿರುತ್ತೇವೆ. ಮಾನ್ಯ ಸಭಾಧ್ಯಕ್ಷರೇ, ಬೇರೆ ರಾಜ್ಯದಿಂದ ಸೆಕೆಂಡ್ಸ್ ಬರುತ್ತಿದೆ ಎನ್ನಕತ್ಕಂಥ ಮಾತನ್ನು ಸಾಂದರ್ಭಿಕವಾಗಿ ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದರು ಎಂದು ನನ್ನ ಭಾವನೆ. ನಾನು ಒಂದು ಮಾತು ಹೇಳುತ್ತೇನೆ. ಸೆಕೆಂಡ್ಸ್ ಹಾವಳಿ ಇದ್ದು ಬಿಟ್ಟರೆ ರೆಗ್ಯುಲರ್ ಆರ್ಮಾಕ್ ರೆಂಟಲ್ಸ್ ಏನಿದೆ ಇದಕ್ಕೆ ಪೆಟ್ಟಾಗುತ್ತದೆ ಎನ್ನತಕ್ಕಂಥಾದ್ದು ತಮ್ಮ ಅಭಿಪ್ರಾಯ, ಬೇರೆ ಏನೂ ಇಲ್ಲ. ಏತಕ್ಕೆಂದರೆ ಆರ್ಮಾಕ್‌ನ್ನು ಹೈ ರೆಂಟಲ್ಸ್ ಕೊಟು ಜನ-ತೆಗೆದುಕೊಂಡು ಬಿಟ್ಟಿದ್ದಾರೆ. ನಾಳೆ ಆದಕ್ಕೆ ಪೆಟ್ಟು ಬಿದ್ದು ಬಿಟ್ಟರೆ ಆ ಬಾಬಿನಲ್ಲಿ ಬರತಕ್ಕ ಆದಾಯ ಹೊರಟು ಹೋಗುತ್ತದೆ. ಈ ದೃಷ್ಟಿಯಿಂದ ಸೆಕೆಂಡ್ಸ್‌ಗೆ ಅವಕಾಶವನ್ನು ಕರ್ನಾಟಕ ರಾಜ್ಯದಲ್ಲಿ ನಾವು ಇನ್ನೂ ಕೊಟ್ಟಿಲ್ಲ. ಆರ್ಮಾಕ್ ಕಂಟ್ರಾಕ್ಟರ್ಸ್ ಯಾರಿದ್ದಾರೆ ಅವರೇ We are satisfied ಎಂದು ಹೇಳುತ್ತಿದ್ದಾರೆ. ಯಾರಾದರೂ ಇದ್ದರೆ ನೀವು ಹೋಗಿ ಕೇಳಿಕೊಳ್ಳಿ. ನಮಗೆ ಸೆಕೆಂಡ್ಸ್ ಹಾವಳಿ ಏನೇನೂ ಇಲ್ಲ, ನಾವು ಸಂಪೂರ್ಣವಾಗಿ ಸ್ಯಾಟಿಸ್‌ಫೈ ಆಗಿದ್ದೇವೆ ಎಂದು ಅವರೇ ಬಂದು ಹೇಳಿದಮೇಲೆ ಆ ಪ್ರಶ್ನೆಗೆ ಅವಕಾಶ ಇಲ್ಲ, ಅನುಮಾನಕ್ಕೆ ಆಸ್ಪದ ಇಲ್ಲ ಎಂಬ ಮಾತನ್ನು ಹೇಳುತ್ತಿದ್ದೇನೆ. ಹೊರರಾಜ್ಯದಿಂದ ಸೆಕೆಂಡ್ಸ್ ಬರುತ್ತದೆ ಎಂಬ ವಿಚಾರ ಬಂದರೆ ನಿಜ ಹೇಳಬೇಕೆಂದರೆ ನಾವು ಬಹಳ ಸ್ಟ್ರಿಕ್ಟಾಗಿ ಇನ್‌ಸ್ಪೆಕ್ಷನ್ಸ್ ಕೊಟ್ಟಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಒಂದು ನಿಮಿಷ ತಾವು ಈಲ್ಡ್ ಆಗುವುದಾದರೆ ಒಂದು ವಿಷಯವನ್ನು ಹೇಳುತ್ತೇನೆ. ಆರ್ಮಾಕ್ ಕಂಟ್ರಾಕ್ಟರ್ಸ್, ಏನಿದ್ದಾರೆ ಅವರು ಸರ್ಟಿಫಿಕೇಟ್ ಕೊಡತಕ್ಕ ಅಗತ್ಯ ಇಲ್ಲ. ಏಕೆಂದರೆ, ಅವರು ಸೆಕೆಂಡ್ಸ್ ಲೂಟಿ ಮಾಡುತ್ತಿದ್ದಾರೆ. ಪ್ಲಾಸ್ಟಿಕ್ ಚೀಲದಲ್ಲಿ ಹೇಗೆ ಬೇಕೋ ಹಾಗೆ ಮಾರಿ-ಕೊಂಡು ಕಡಿಮೆ ತೂಕ ಕೊಟ್ಟುಕೊಂಡು ಲೂಟಿಯಾಗುತ್ತಿದೆ. ಅವರು ಹೇಳದೇ ಏನು ಮಾಡುತ್ತಾರೆ?

ಶ್ರೀ ಸಿ. ಬೈರೇಗೌಡ :– ನಾನು ಮಾನ್ಯ ಸಭಾನಾಯಕರ ಗಮನಕ್ಕೆ ತರುವುದು ಏನೆಂದರೆ, ಆರ್ಮಾಕ್ ಕಂಟ್ರಾಕ್ಟ್ ಮತ್ತು ಸೆಕೆಂಡ್ಸ್ ಮಾರತಕ್ಕದ್ದು ಎರಡನ್ನೂ ಒಬ್ಬರೇ ಮಾಡುತ್ತಿದ್ದರೆ ಒಂದರಲ್ಲಿ ಹೋಗ ಬಹುದು, ಒಂದರಲ್ಲಿ ಬರಬಹುದು. ಅವರಿಗೇನೂ ಆಗುವುದಿಲ್ಲ. ಆದರೆ ವಾಸ್ತವವಾಗಿ ಇರತಕ್ಕದ್ದು ಹೊರಗಡೆಯಿಂದ ಸಾಕಷ್ಟು ಸೆಕೆಂಡ್ಸ್ ಬರುತ್ತಿದೆ.

ಶ್ರೀ ಎಸ್. ಬಂಗಾರಪ್ಪ :– ಅಂತಹವರು ಎಲ್ಲೋ ಒಬ್ಬೊಬ್ಬರು ಇರಬಹುದು. ಡಿಸ್ಟಿಲರೀಸ್‌ನರ್ಸ್, ಮತ್ತು ಆರ್ಮಾಕ್‌ನ್ನು ಹೈ ರೆಂಟಲ್ಸ್‌ಗೆ ತೆಗೆದುಕೊಂಡಿರತಕ್ಕಂಥವರು ಯಾರಾದರೂ ಕಂಟ್ರಾಕ್ಟರ್ಸ್ ಇದ್ದರೆ ಒಬ್ಬಿಬ್ಬರು ಸಿಗುತ್ತಾರೆ. ಆದರೆ ಕರ್ನಾಟಕ ರಾಜ್ಯದಲ್ಲಿ ಆರ್ಮಾಕ್ ಕಂಟ್ರಾಕ್ಟರ್ಸ್ ಬೇರೆ ಇದ್ದಾರೆ, ಡಿಸ್ಟಿಲರಿ ಓನರ್ಸ್ ಬೇರೆ ಇದ್ದಾರೆ. ನೀವು ಅದನ್ನು ಟ್ಯಾಗ್ ಆನ್ ಮಾಡಿದರೆ ಉಪಯೋಗ ಆಗುವುದಿಲ್ಲ. ಅವರ ರೊಟ್ಟಿ ಜಾರಿದರೆ ತುಪ್ಪದಲ್ಲಿ ಬೀಳುತ್ತದೆ ಎಂಬ ಭಾವನೆಯಿಂದ ನೀವು ಹೇಳುತ್ತಿದ್ದೀರಿ. But that is not the thing here· There may be one ofr two execptions.

ಎಕ್ಸೆಪ್‌ಷನ್ ಆಗಿ ಇದ್ದೇ ಇರುತ್ತಾರೆ. ಆದುದರಿಂದ ನಾವು ಬಿಗಿಯಾದ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ನಾವು ಸ್ಪಷ್ಟವಾಗಿ ಆದೇಶವನ್ನು ಅಬಕಾರಿ ಕಮಿಷನರ್‌ಗೆ ಕೊಟ್ಟಿದ್ದೇವೆ. ಇಲಾಖೆಗೆ ಕೊಟ್ಟಿದ್ದೇವೆ. ಬಹಳ ಬಿಗಿಯಾದ ಕಾರ್ಯಕ್ರಮವನ್ನೂ ಕೂಡ ನಮ್ಮ ಅಧಿಕಾರಿಗಳು ಹಾಕಿದ್ದಾರೆ. ಈ ವಿಚಾರದಲ್ಲಿ every body is satisfied. ಹೊಗಳಿಕೆಯನ್ನು ಇಲಾಖೆಗೆ ಕೊಡಬೇಕೆಂಬ ಆಸೆ ನನಗೆ ಇಲ್ಲ. ಕಂಪ್ಲೇಂಟ್ಸ್ ಕೂಡಾ ಇಲ್ಲದಿರುವುದರಿಂದ ಅವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಆಮೇಲೆ ತಾವು ಅಬಕಾರಿ ಶುಲ್ಕ ಕಡಿಮೆ ಮಾಡಬೇಕೆಂಬ ವಿಚಾರ ಏನು ಹೇಳಿದ್ದೀರಿ ಈ ವಿಚಾರದಲ್ಲಿ ಒಂದೇ ಒಂದು ಕೊನೆಯ ಮಾತನ್ನು ಹೇಳುತ್ತೇನೆ. ಅಬಕಾರಿ ಶುಲ್ಕ 20 ರೂಪಾಯಿಗೆ ಏನು ಒಂದೇ ಸಲ ಜಂಪ್ ಮಾಡಿದ್ದೇವೆ, ಇದರಿಂದ ಸೇಲ್ಸ್ ಸಿಕ್ಕಾಪಟ್ಟೆ ಕಡಿಮೆಯಾಗಿದೆ ಎಂಬ ವಿಚಾರ ಇದೆ. ನಮಗೆ ರೆವಿನ್ಯೂಸ್ ಕೂಡಾ ಜಾಸ್ತಿ ಬೇಕಾಗುತ್ತದೆ. ಬಜೆಟ್‌ಗೆ ಹಣ ಕೂಡಾ ಬೇಕು. ಮಾರ್ಜ ಎಂಡ್ ಪರೆಗೆ ಕೂಡಾ ಹಣ ಬೇಕು. ಇದನ್ನು ನಾವು, ಗಮನಕ್ಕೆ ತೆಗೆದುಕೊಳ್ಳುತ್ತೇವೆ·

positive suggestion has been by the hon'ble member sitting there· There may be same line of thinking on this side also.

ಇದನ್ನು ನಾವು ಸಂಪೂರ್ಣವಾಗಿ ಗಮನದಲ್ಲಿಟ್ಟುಕೊಂಡು ಯಾವ ರೀತಿ ತೀರ್ಮಾನ ಮಾಡಬೇಕೆಂದು ಸರಕಾರ ಅಂತಿಮವಾಗಿ ತೀರ್ಮಾನ ಮಾಡುತ್ತದೆ. ಇಷ್ಟು ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಲ್ಲೆ.

ಶ್ರೀ ಆರ್. ವಿ. ದೇಶಪಾಂಡೆ :– ಮಾನ್ಯ ಅಧ್ಯಕ್ಷರೇ, ಪಾಂಡಿಚೇರಿ ಮತ್ತು ಗೋವ ದಿಂದ ಬರುವುದು ಇಲ್ಲಿ ಮಿಸ್‌ಯೂಸ್ ಆಗುತ್ತದೆಂದು ಹೇಳಿದ್ದಾರೆ. ನಿಜವಾಗಿಯೂ ಮಿಸ್‌ಯೂಸ್ ಮಾಡುತ್ತಾರೆ. ಅದರ ಸಲುವಾಗಿ ಪಾಂಡಿಚೇರಿ ಮತ್ತು ಗೋವಾದಿಂದ ಏನು ಬರುತ್ತದೆ ಅದನ್ನು ಬ್ಯಾನ್ ಮಾಡಬಹುದು ಅಥವಾ ಸ್ಟ್ರಿಕ್ಟ್ ವಿಜಿಲೆನ್ಸ್ ಮಾಡಬಹುದು. ಕೇವಲ ಎಕ್ಸ್‌ಪೋರ್ಟ್ ಡ್ಯೂಟಿ ಕಡಿಮೆ ಮಾಡಿದರೆ ಕೆಲಸ ಆಗುವುದಿಲ್ಲ. ನೀವು ರೆವಿನ್ಯೂ ನೋಡಬೇಕಾಗುತ್ತದೆ. ರೆವಿನ್ಯೂ ನೋಡುವಾಗ ಬೇರೆ ರಾಜ್ಯದಿಂದ ಈ ರಾಜ್ಯದೊಳಗೆ ಏನು

ಲಿಕ್ಕರ್ ಬರುತ್ತದೆ ಆದರ ಮೇಲೆ ಇಂಪೋರ್ಟ್ ಡ್ಯೂಟಿ ಹಾಕಬೇಕಾಗುತ್ತದೆ. ನಿಮ್ಮ ಇಂಡಸ್ಟ್ರಿ ಸರ್ವೆವ್ ಆಗಬೇಕು, ನಿಮ್ಮ ರೆವಿನ್ಯೂ ಜನರೇಟಾಗಬೇಕಾದರೆ ಇದನ್ನೂ ಸಹ ವಿಚಾರ ಮಾಡಬೇಕಾಗುತ್ತದೆ. ತಮಗೆ ಗೊತ್ತಿದೆ. ತಾವು ಆರ್ಕಾಕ್ ಮೇಲೆ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕಿದ್ದೀರಿ. ಆದರೆ ಇವತ್ತು ಐ. ಎಂ. ಎಲ್. ಮೇಲೆ ಮಲ್ಟಿ ಪಾಯಿಂಟ್ ಟ್ಯಾಕ್ಸ್ ಇದೆ. ಇದರಿಂದ ನಿಮಗೆ ಎಫಕ್ಟ್ ಆಗುತ್ತದೆ. ನಿಮಗೆ ಸೇಲ್ಸ್ ಹೆಚ್ಚಾಗಬೇಕಾದರೆ ನೀವು ಸಿಂಗಲ್ ಪಾಯಿಂಟ್ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದೇವೆ. ಎಕ್ಸ್‌ಪೋರ್ಟ್ ಕಡಿಮೆ ಮಾಡುವುದರಿಂದ ರೆವಿನ್ಯೂ ಹೆಚ್ಚಾಗುವುದಿಲ್ಲ. ಎಕ್ಸ್‌ಪೋರ್ಟ್ ಡ್ಯೂಟಿ ಕಡಿಮೆ ಮಾಡುವುದು ಬೇರೆ ವಿಷಯ. ಇಂಪೋರ್ಟ್ ಡ್ಯೂಟಿ ಹೆಚ್ಚು ಮಾಡಬೇಕಾಗುತ್ತದೆ. ಅದೇ ಪ್ರಕಾರ ಸಿಂಗಲ್ ಪಾಯಿಂಟ್ ಬಗ್ಗೆಯೂ ತಾವು ವಿಚಾರ ಮಾಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಅಧ್ಯಕ್ಷರೇ, These are all the suggestions which will be thought of positively. ಅದನ್ನು ವಿಚಾರ ಮಾಡುತೇನೆ. That point is very good point. ಇಂಪೋರ್ಟ್ ಡ್ಯೂಟಿ ಜಾಸ್ತಿ ಮಾಡತಕ್ಕಂಥ ವಿಚಾರದಲ್ಲಿ It is a very positive suggestion. We will certainly keep that factor in mind. ತಾವು ಆರ್ಕಾಕ್ ವಿಚಾರದಲ್ಲಿ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಇರತಕ್ಕ ಬಗ್ಗೆ ಹೇಳಿದ್ದನ್ನು ನಾನು ಗಮನದಲ್ಲಿಟ್ಟು ಕೊಳ್ಳುತ್ತೇನೆ. ಇದರ ಬಗ್ಗೆ ಏನು ಮಾಡಬೇಕು ಎನ್ನುವುದನ್ನು ನೋಡಿ ಈ ಎಲ್ಲಾ ಪಾಯಿಂಟ್‌ಗಳನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ. ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆಯಲ್ಲಿ ಸಂಪೂರ್ಣವಾದ ವಿವರಗಳನ್ನು ಕೊಡುವುದಕ್ಕಾಗುವುದಿಲ್ಲ. ಆದರೂ ನಮಗೆ ಸಾಧ್ಯವಿದ್ದ ಎಲ್ಲಾ ವಿಚಾರಗಳನ್ನು ಕೊಟ್ಟಿದ್ದೇವೆ. ಅಂತಿಮವಾಗಿ ಒಂದು ತೀರ್ಮಾನಕ್ಕೆ ಬರುವಾಗ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ. ನಮಗೆ ರೆವಿನ್ಯೂ ಎಲ್ಲೂ ಹಾಳಾಗಬಾರದು. ಇದನ್ನು ಸಹ ಗಮನದಲ್ಲಿಟ್ಟುಕೊಂಡು ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು :– ಶ್ರೀ ವಾಟಾಳ್ ನಾಗರಾಜ್‌ರವರ ಹೆಸರು ಈ ಗಮನ ಸೆಳೆಯುವ ಸೂಚನೆಯಲ್ಲಿ ಸಹಿ ಇಲ್ಲದೆ ಸೇರಿಸಿರುವುದು ಅಕ್ಷಮ್ಯ. ಇದಕ್ಕೆ ಕಾರಣರಾದವರ ಮೇಲೆ ಕ್ರಮ ತೆಗೆದುಕೊಳ್ಳುವುದು ಅಗತ್ಯ. ಕಾರ್ಯದರ್ಶಿಯವರು ಅವರನ್ನು ಕೂಡಲೇ ಅಮಾನತ್ತಿನಲ್ಲಿಟ್ಟು ವಿಚಾರಣೆ ನಡೆಸುವುದು. ಈಗ ವಿಧೇಯಕವನ್ನು ಪರ್ಯಾಲೋಚಿಸುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ, ವಿಧೇಯಕದ ಮೇಲಿನ ಚರ್ಚೆ ನಡೆಯಲಿ. ನನ್ನ ಅಡ್ಡಿಯಿಲ್ಲ. ನನ್ನ ಪ್ರಾರ್ಥನೆ ಏನೆಂದರೆ, ಅದು ಆದ ತಕ್ಷಣವಾದರೂ ರೈತರ ಸಮಸ್ಯೆ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು. 12 ಗಂಟೆಗೆ ತೆಗೆದುಕೊಳ್ಳುತ್ತೇನೆಂದು ಹೇಳಿದಿರಿ.

ಅಧ್ಯಕ್ಷರು :– ಈಗ 12–00 ಗಂಟೆ ಆಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ, ವಿಧೇಯಕದ ಮೇಲಿನ ಚರ್ಚೆ ಮುಂದಕ್ಕೆ ಹಾಕಿದರೆ ಒಳ್ಳೆಯದು. ಏಕೆಂದರೆ ಅದಕ್ಕೆ ಸಮಯ ಇದೆ. ತಾವು ನಮಗೆ ಸಮಯವನ್ನು ಕೊಟ್ಟಿದ್ದೀರಿ. ಅದಕ್ಕಾಗಿ ರೈತರ ಪರವಾಗಿ ತಮಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಪ್ರಶ್ನೆ ಏನೆಂದರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಸುಮಾರು ಒಂದೂ ಒಂದೂವರೆ ಗಂಟೆಯೊಳಗೆ ಉತ್ತರ ಕೊಟ್ಟು ಮಧ್ಯಾಹ್ನ ಮೈಸೂರಿಗೆ ಹೋಗುತ್ತಾರೆ ಎಂದು ಹೇಳಿದರು. ನಾವು ವಿಧೇಯಕದ ಮೇಲೆ ಆಮೇಲೆ ಚರ್ಚೆ ಮಾಡೋಣ. ಮುಂದೆ ಸದನ 26 ಮತ್ತು 27ರ ವರೆಗೂ ಮುಂದುವರಿಯುತ್ತಿದೆ. ಆಗ ವಿಧೇಯಕದ ಮೇಲೆ ಚರ್ಚೆ ಮಾಡೋಣ. ಆದರೆ ಇದರ ಬಗ್ಗೆ ಚರ್ಚೆ ಮಾಡಲು ಎರಡು ಮೂರು ಗಂಟೆಗಳಾದರೂ ಬೇಕು. ನಾನು ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನೀವು 26ನೇ ತಾರೀಖಿ ಮಾತನಾಡಿ. ಈಗ ರೈತರ ಸಮಸ್ಯೆ ಬಗ್ಗೆ ಚರ್ಚೆ ಮಾಡೋಣ.

ಅಧ್ಯಕ್ಷರು :– ವಿರೋಧ ಪಕ್ಷದ ನಾಯಕರಿಗೆ ಇನ್ನೂ ಎಷ್ಟು ಸಮಯ ಬೇಕು ? ತಾವು ಈಗಾಗಲೇ 215 ನಿಮಿಷ ತೆಗೆದುಕೊಂಡಿದ್ದೀರಿ.....

ಶ್ರೀ ಡಿ. ಬಿ. ಚಂದ್ರೇಗೌಡ :– 2 ಗಂಟೆ ಬೇಕು.

ಅಧ್ಯಕ್ಷರು :– ನಿಮಗೆ ಇನ್ನೂ ಎರಡೂ ಗಂಟೆಗಳು ಬೇಕಾಗಿರುವುದರಿಂದ ಅಲ್ಪಕಾಲಾವಧಿ ಚರ್ಚೆಯನ್ನು ತೆಗೆದುಕೊಳ್ಳುವ ಬಗ್ಗೆ ನಾವು ಏನು ತೀರ್ಮಾನ ಮಾಡಿದ್ದೇವೆ ಅದನ್ನು ಪ್ರಾರಂಭ ಮಾಡೋಣ. ಅದಕ್ಕೆ ತಾವು 26 ನೇ ತಾರೀಖಿ ತಮ್ಮ ಭಾಷಣ ಮುಂದುವರಿಸಬಹುದು. ಈಗ ಮಾನ್ಯ ಯಡಿಯೂರಪ್ಪನವರು ಪ್ರಾರಂಭ ಮಾಡಲಿ.

ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೇ, ನಾನು ಸಹ ಇದೇ ತರಹದ ಒಂದು ಸೂಚನೆಯನ್ನು ತಮಗೆ ಕಳುಹಿಸಿದ್ದೆ. ಎನ್. ಜಿ. ಎಫ್. ಕಾರ್ಖಾನೆಯಲ್ಲಿ ನಡೆಯುವ ದುರಾಡಳಿತದ ಬಗ್ಗೆ ಅಲ್ಲಿ ಸುಮಾರು

32 ಕೋಟಿ ರೂಪಾಯಿಗಳಷ್ಟು ಹಣ ನಷ್ಟ ಆಗಿರುವುದರ ಬಗ್ಗೆ ನಾನು ಕೂಡ ಸೂಚನೆಯನ್ನು ಕಳುಹಿಸಿದ್ದೇನೆ. ದಯಮಾಡಿ ಇವತ್ತು ಸಾಧ್ಯವಿಲ್ಲದಿದ್ದರೂ ಕೂಡ ಮುಂದೆ ಸಭೆ ನಡೆಯುವಂತಹ ಎರಡು ದಿವಸಗಳಲ್ಲಿ ಒಂದು ದಿವಸ ಇದನ್ನು ತಮ್ಮ ಕಾರ್ಯಕಲಾಪಗಳ ಪಟ್ಟಿಯಲ್ಲಿ ಹಾಕಿ ಅದಕ್ಕೆ ಅವಕಾಶ ಮಾಡಿಕೊಡಬೆ ಕೆಂದು ನಾನು ಕೇಳಿಕೊಳ್ಳುತ್ತೇನೆ.

68ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿಚರ್ಚೆ

ವಿಷಯ :– ರಾಜ್ಯದಲ್ಲಿ ರೈತರ ಸಾಲ ಮನ್ನಾ ಮಾಡುವುದು.

† ಶ್ರೀ ಬಿ. ಎಸ್. ಯಡಿಯೂರಪ್ಪ :– (ಶಿಕಾರಿಪುರ) ಸನ್ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರವು ಈ ದೇಶದ ರೈತರ ಸಾಲ ಮನ್ನಾ ಮಾಡುವಂಥ ಒಂದು ಯೋಜನೆಯನ್ನು ಏನು ಜಾರಿಗೆ ತಂದಿದೆ ? ಇದರಿಂದ ನಮ್ಮ ರಾಜ್ಯದ ರೈತರುಗಳಿಗೆ ಅನುಕೂಲವಾಗುವುದಿಲ್ಲ. ರೈತ ಎಂದರೆ ಈ ಕೆಳಕಂಡ ಸಮೂಹದಲ್ಲಿ ಸೇರುತ್ತಾನೆ. ಕೃಷಿ ಕಾರ್ಮಿಕರು ಇದರಲ್ಲಿ ಸೇರುತ್ತಾರೆ, ನೇಕಾರ ಇದರಲ್ಲಿ ಸೇರುತ್ತಾನೆ, ಮೀನುಗಾರ ಇದರಲ್ಲಿ ಸೇರುತ್ತಾನೆ. ಹೀಗಾಗಿ ಈ ರೈತ ಸಮೂಹದಲ್ಲಿ ಗ್ರಾಮೀಣ ಪ್ರದೇಶದ ಜನತೆಗೆ ಸಂಬಂಧಪಟ್ಟಂತೆ ಅತ್ಯಂತ ಪ್ರಮುಖವಾಗಿ ವಿಷಯದ ಬಗ್ಗೆ ಚರ್ಚೆಯಾಗಬೇಕು. ಕರ್ನಾಟಕ ರಾಜ್ಯದಲ್ಲಿ ಒಂದು ವಿಶೇಷವಾದಂಥ ಪರಿಸ್ಥಿತಿ ಇತ್ತು. 1983 ಮತ್ತು 1987 ರಲ್ಲಿ ಇಂಟರೆಸ್ಟ್ ಸಬ್ಸಿಡಿ ಸ್ಕೀಮ್‌ನ್ನು ಅವತ್ತಿನ ಸರ್ಕಾರ ತಂದಿತು.

(ಮಾನ್ಯ ಸದಸ್ಯರಾದ ಬ್ಲೇಸಿಯಸ್ ಡಿಸೌಜರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿರುವ ಹಾಗೆ, ಸುಸ್ತಿದಾರರು ಶೇಕಡ 5 ಜನ ನಮ್ಮ ರೈತರು ಇಲ್ಲ, ಮತ್ತೆ ಆ ಸಮಯದಲ್ಲಿ ರೈತ ಸಾಲ ಕೊಡುವಂಥ ಸ್ಥಿತಿಯಲ್ಲಿ ಇಲ್ಲದೇ ಇದ್ದಂಥ ಸಂದರ್ಭದಲ್ಲೂ ಸಹಾ ಈ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡುವಂಥ ಸಂದರ್ಭದಲ್ಲಿ ರೈತನನ್ನು ಹೇಗಾದರೂ ಋಣಮುಕ್ತನನ್ನಾಗಿ ಮಾಡಬೇಕೆನ್ನುವ ದೃಷ್ಟಿಯಿಂದ ಎಲ್ಲಾ ಸಹಕಾರ ಸಂಘಗಳಲ್ಲಿ ರೈತನ ಹತ್ತಿರ ದುಡ್ಡು ಇಲ್ಲದಿದ್ದರೂ ಸಹಾ ಬುಕ್ ಅಡ್ಜಸ್ಟ್‌ಮೆಂಟ್ ಮಾಡಿಕೊಂಡು ರಿನ್ಯೂ ಮಾಡಿದ ಪರಿಣಾಮ, ಇಡೀ ದೇಶದಲ್ಲಿ ಕೇಂದ್ರ ಸರ್ಕಾರದ ಈ ಯೋಜನೆಯಿಂದ ಆ ರೈತ ಸಮೂಹಕ್ಕೆ ಆಯಾ ರಾಜ್ಯದಲ್ಲಿ ಅನುಕೂಲವಾದರೂ, ಕರ್ನಾಟಕ ರಾಜ್ಯದಲ್ಲಿ ಇರುವಂಥ ರೈತನಿಗೆ ಇದರಿಂದ ಅನುಕೂಲವಾಗುವುದಿಲ್ಲ. ಅದಕ್ಕೆ, ಅನುಕೂಲವಾಗುವಂತೆ ರೈತರ ಸಾಲ ಮನ್ನಾ ಮಾಡಬೇಕೆಂದು ಒಂದು ಹೊಸ ಯೋಜನೆಯನ್ನು ನಮ್ಮ ರಾಜ್ಯ ಸರ್ಕಾರ ಮಾಡಬೇಕೆಂದು ಇವತ್ತಲ್ಲ, ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ವೀರೇಂದ್ರ ಪಾಟೀಲರು ಅಧಿಕಾರ ವಹಿಸಿಕೊಂಡ ಮೊದಲ ದಿವಸವೇ ಇಲ್ಲಿ ಧರಣಿ ಕುಳಿತು ಹೋರಾಟ ಮಾಡಿದೆವು. ಕೇಂದ್ರ ಸರ್ಕಾರ ಈ ಯೋಜನೆಯನ್ನು ಜಾರಿಗೆ ತರುವುದಕ್ಕೆ ಮುಂಚೆ, ನಮ್ಮ ರಾಜ್ಯದಲ್ಲಿರುವಂಥ ರೈತನ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ನವ ಗೆ ಅನುಕೂಲ ಕರವಾದಂಥ ರೈತರ ಸಾಲ ಮನ್ನಾ ಯೋಜನೆಯನ್ನು ಜಾರಿಗೆ ತರುವಂತೆ ಪ್ರಯತ್ನ ಮಾಡಿ ಎಂದು ಹೇಳಿ ಇಲ್ಲಿ ಧರಣಿ ಕುಳಿತು ಕಣ್ಣೀರು ಹಾಕಿದೆವು. ಅವತ್ತು ರೈತರ ಸಾಲ ವಸೂಲಾತಿಗೆ ತಡೆ ಆಜ್ಞೆಯನ್ನು ಸನ್ಮಾನ್ಯ ವೀರೇಂದ್ರ ಪಾಟೀಲರು ಕೊಟ್ಟಿದ್ದಂಥಾದ್ದು ನಮಗೆಲ್ಲಾ ಗೊತ್ತಿರುವಂಥ ಸಂಗತಿ. ಕೊನೆಗೂ ನಾವು ಅತ್ತು ಕರೆದು ಈ ಸದನ ಪ್ರಾರಂಭವಾದಾಗ ಇಲ್ಲಿ ಧರಣಿ ಕುಳಿತು ರಾಜ್ಯದ ರೈತರ ಸಾಲ ಮನ್ನಾ ಮಾಡುವುದರ ಬಗ್ಗೆ ಸರ್ಕಾರ ಸರಿಯಾದಂಥ ನಿಲುವನ್ನು ತೆಗೆದುಕೊಳ್ಳಬೇಕು ಎನ್ನುವುದಕ್ಕೋಸ್ಕರ ಅನಿವಾರ್ಯವಾಗಿ ನಾನು ಧರಣಿ ಕುಳಿತುಕೊಳ್ಳುವಂಥ ಪರಿಸ್ಥಿತಿ ಒದಗಿ ಬಂತು. ಸನ್ಮಾನ್ಯ ಅಧ್ಯಕ್ಷರೇ, ಯಾರು ಅಧ್ಯಕ್ಷರಿದ್ದಾರೋ ಅವರೂ ಸಹಾ ರೈತರ ಮಕ್ಕಳಿದ್ದಾರೆ. ಈಗಿರುವಂಥ ಮಾನ್ಯ ಮುಖ್ಯಮಂತ್ರಿಗಳೂ ಸಹಾ ರೈತರ ಒಂದು ಕುಟುಂಬದ ಹಿನ್ನೆಲೆಯಿಂದ ಬಂದಿರತಕ್ಕವರಾಗಿದ್ದಾರೆ. ನಾನು ದೈವೀಕವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ಈ ರೈತನ ಶಾಪ ಯಾರು ಯಾರಿಗೆ ತಟ್ಟಿದೆಯೋ ಅವರ್ಯಾರೂ ಉಳಿಯಲಿಲ್ಲ. ಸನ್ಮಾನ್ಯ ಮುಖ್ಯ-ಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ. ನಾನು ಅನೇಕ ವರ್ಷಗಳಿಂದ ರೈತರ ಪರವಾಗಿ ಹೋರಾಟ ಮಾಡಿಕೊಂಡು ಬಂದಿರುವವನು. ಗೇಣಿದಾರರ ಸಮಸ್ಯೆ ಕಾಲದಿಂದ ರೈತರ ಪರವಾಗಿ ಹೋರಾಟ ಮಾಡಿದ್ದೇನೆ. ತಾವು ಕೃಷಿ ಸಚಿವರಾಗಿದ್ದಂಥ ಸಂದರ್ಭದಲ್ಲಿ ಅನೇಕ ಕಡೆ ತಾವು ಮಾತನಾಡಿದಂಥ ಸಂದರ್ಭದಲ್ಲಿ ಇದರ ಬಗ್ಗೆ ಹೇಳಿದ್ದೀರಿ. ಈ ಸದನದ ಒಳಗೂ ಸಹಾ ತಾವು ಕೃಷಿ ಸಚಿವರಾಗುವುದಕ್ಕಿಂತ ಮುಂಚೆ, ಸನ್ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದ ರೈತನ ಸಾಲ ಮನ್ನಾ ಮಾಡುವಂಥ ವಿಚಾರದಲ್ಲಿ ಅನುಕೂಲಕರವಾದಂಥ ಯೋಜನೆಯನ್ನು ತರಬೇಕೆಂದು ನಾವು ಕೇಳಿದಾಗ, ತಾವು ಇಲ್ಲೇ ಈ ಸದನದಲ್ಲೇ ಇದರ ಬಗ್ಗೆ ಸರಿಯಾದ ಯೋಜನೆ ಮಾಡಬೇಕು, ಈ ರಾಜ್ಯದ ರೈತನ ಪರಿಸ್ಥಿತಿ ಸರಿಯಿಲ್ಲವೆಂದು ಹೇಳಿದ್ದೀರಿ. ಇದರ ಜೊತೆಗೆ ನೀವು ರೈತರ ಪರವಾಗಿ ಮಾತನಾಡಿರುವಂಥ 15–20 ಪ್ರೆಸ್ ಕಟಿಂಗ್ಸ್ ಸಹಾ ನನ್ನ ಹತ್ತಿರ ಇದೆ. ಈ ರಾಜ್ಯದಲ್ಲಿ ರೈತನು ಬರಗಾಲಕ್ಕೆ ತುತ್ತಾಗಿ ಕಷ್ಟಪಡುತ್ತಿದ್ದಾನೆ, ಅವನನ್ನು ಋಣಮುಕ್ತನನ್ನಾಗಿ ಮಾಡುವಂಥ ಆಗತ್ಯ ಇದೆ ಎನ್ನುವ ಮಾತನ್ನು ನೀವು ಅನೇಕ ಬಾರಿ ಹೇಳಿದ್ದೀರಿ. ಅದು ಅಷ್ಟಕ್ಕೇ ನಿಲ್ಲಲಿಲ್ಲ. ತಾವು ಬಿಜಾಪುರದಲ್ಲಿ ಕೊಟ್ಟ